

# ಮೊಸಳೆಗಳನ್ನು ಕಂಡರೆ ಏನು ಮಾಡಬೇಕು ಏನು ಮಾಡಬಾರದು

| ಮಾಡಬೇಕು ✓ | ಮಾಡಬಾರದು ✗ |
| --- | --- |
| ಮೊಸಳೆಗಳಿರುವ ಪ್ರದೇಶಗಳಲ್ಲಿ ಹೆಚ್ಚು ಜಾಗರತೆ ವಹಿಸಿ, ನೀರಿನ ಅಂಚಿನಲ್ಲಿ ಅಥವಾ ನೀರಿಗೆ ಹೋಗಬೇಡಿ | ಮೊಸಳೆಗಳಿಗೆ ಆಹಾರ ನೀಡಲು ಅಥವಾ ಅದನ್ನು ಪ್ರಚೋದಿಸಲು ಮತ್ತು ಕಿರುಕುಳ ನೀಡಲು ಹೋಗಬೇಡಿ, ಅದು ಬಹುಬೇಗ ನಿಮ್ಮ ಮೇಲೆ ಅತೀ ವೇಗವಾಗಿ ಆಕ್ರಮಣ ಮಾಡಬಹುದು |
| ಮೊಸಳೆ ಕಂಡ ಕೂಡಲೇ ಇತರರಿಗೂ ತಿಳಿಸಿ ಮತ್ತು ಶಾಂತವಾಗಿದ್ದು ಸುರಕ್ಷಿತ ಅಂತರ ಕಾಪಾಡಿಕೊಳ್ಳಿ | ಯಾವುದೇ ಕಾರಣಕ್ಕೂ ಮೊಸಳೆಗಳಿರುವ ಸ್ಥಳದಲ್ಲಿ ಜಲ ಕ್ರೀಡೆಗಳಲ್ಲಿ ಪಾಲ್ಗೊಳ್ಳಬೇಡಿ, ಈಜಬೇಡಿ |
| ಮೊಸಳೆ ಇರುವ ಕಡೆ ಸಂಚರಿಸುವಾಗ ಜಾಗರೂಕರಾಗಿರಿ. ದೋಣಿ ಹತ್ತುವಾಗ ಇಳಿಯುವಾಗ ಮತ್ತೆ ದೋಣಿಯಲ್ಲಿ ಚಲಿಸ ಬೇಕಾದರೆ ಕೈ ಮತ್ತು ಕಾಲುಗಳನ್ನು ನೀರಿನಲ್ಲಿ ಇಡಬೇಡಿ | ಮೊಸಳೆಗಳಿರುವ ಪ್ರದೇಶದಲ್ಲಿ ನಾಲ್ಕು ಕಾಲಿನ ಭಂಗಿಯಲ್ಲಿ ನಿಲ್ಲಬೇಡಿ, ಅದು ನಿಮ್ಮನ್ನು ನಾಲ್ಕು ಕಾಲಿನ ಪ್ರಾಣಿಗಳೆಂದು ಭಾವಿಸಿ ಬೇಟೆಗೆ ಬರುವ ಸಾಧ್ಯತೆ ಹೆಚ್ಚು |
| ಬೆಳಗಿನ ಸಮಯದಲ್ಲಿ ಮಾತ್ರ ನದಿಯ ಅಂಚನ್ನು ಬಳಸಿ | ಮೊಸಳೆಗಳಿರುವ ಕಡೆ ಸ್ನಾನ ಮತ್ತು ಬಟ್ಟೆ ಒಗೆಯುವುದು, ಆಚರಣೆಗಳು ಅಥವಾ ಮೀನು, ಏಡಿ ಹಿಡಿಯುವದನ್ನು ಮಾಡಬೇಡಿ |
| ಜಾನುವಾರುಗಳನ್ನು ಮೊಸಳೆ ಇರುವ ಕಡೆ ಮೇಯಲು ಬಿಡಬೇಡಿ ಮತ್ತು ನದಿಯ ಅಂಚಿನ ಕಡೆ ಗಮನ ಹರಿಸಿ | ನದಿ ತೀರಗಳಲ್ಲಿ ಮಲವಿಸರ್ಜನೆ ಮಾಡಬೇಡಿ |
| ಮೊಸಳೆಗಳು ದೂರದಿಂದ ನಿಮ್ಮನ್ನು ಬೆನ್ನತ್ತುತ್ತಿದ್ದರೆ ಜೋರಾಗಿ ಕೂಗಿ ಹತ್ತಿರದ ಜನರನ್ನು ಎಚ್ಚರಿಸಿ ಮತ್ತು ಹತ್ತಿರದ ಮರಗಳನ್ನೇರಿ | ದಿನವೂ ಒಂದೇ ನದಿಯ ತೀರದಲ್ಲಿ ನೀರಿಗಾಗಿ ಬರುವುದನ್ನು ಅಥವಾ ಬಟ್ಟೆ ಒಗಿಯುವುದಕ್ಕಾಗಿ ಒಂದೇ ಸ್ಥಳವನ್ನು ಬಳಸ ಬೇಡಿ |
| ಹೊಸ ನೀರಿನ ಸ್ಥಾವರಗಳನ್ನು ಬಳಸಬೇಕಾದರೆ ಸ್ಥಳೀಯ ಜನರ ಹತ್ತಿರ ಮೊಸಳೆಯ ಇರುವಿಕೆಯ ಬಗ್ಗೆ ತಿಳಿದುಕೊಳ್ಳಿ | ಮನುಷ್ಯ ವಸತಿಗಳ ಹತ್ತಿರದ ನೀರಿಗೆ ಮೀನಿನ ತ್ಯಾಜ್ಯ ಅಥವಾ ಮಾಂಸದ ತ್ಯಾಜ್ಯಗಳನ್ನು ಎಸೆಯಬೇಡಿ, ಇದು ಮೊಸಳೆಗಳನ್ನು ಆಕರ್ಷಿಸುತ್ತವೆ |
| ಮೊಸಳೆಯ ಇರುವಿಕೆಯನ್ನು ತಿಳಿಸುವ ಎಚ್ಚರಿಕೆಯ ಫಲಕಗಳನ್ನು ಅನುಸರಿಸಿ, ಮತ್ತು ಮಾರ್ಗಸೂಚಿಗಳನ್ನು ಬಳಸಿ | ಮೊಸಳೆ ಸಂರಕ್ಷಣೆ ವಲಯಕ್ಕೆ ಅನುಮತಿ ಇಲ್ಲದೆ ಅಥವಾ ಮಾರ್ಗದರ್ಶಕರಿಲ್ಲದೆ ಹೋಗಬೇಡಿ |
| ಮಾನವನ ವಸತಿ ಪ್ರದೇಶದಲ್ಲಿ ಮೊಸಳೆ ಕಂಡು ಬಂದರೆ ಅದರ ಮೇಲೆ ದೃಷ್ಠಿ ಇಡಿ, ಅದರೊಂದಿಗೆ ತೊಡಗಬೇಡಿ, ತಕ್ಷಣವೇ ಅರಣ್ಯ ಇಲಾಖೆಗೆ ಕರೆ ಮಾಡಿ | ನೀರಿನ ಹತ್ತಿರವಿರುವ ಮಣ್ಣಿನ ದಿಬ್ಬಗಳ ಹತ್ತಿರ ಹೋಗಬೇಡಿ, ಈ ಸ್ಥಳಗಳು ಮೊಸಳೆಗಳು ಮರಿ ಮಾಡುವ ಸ್ಥಳಗಳಾಗಿರುತ್ತದೆ |
| ಯಾರಾದರೂ ಮೊಸಳೆಗಳಿಂದ ಆಕ್ರಮಣಕ್ಕೊಳಗಾಗಿದ್ದರೆ ಆದಷ್ಟು ಬೇಗ ಆಸ್ಪತ್ರೆಗೆ ದಾಖಲಿಸಿ | ಪ್ರತೀಕಾರಕ್ಕಾಗಿ ಮೊಸಳೆಗಳ ಮೇಲೆ ಆಕ್ರಮಣ ಮಾಡಬೇಡಿ, ಮೊಸಳೆಗಳನ್ನು ಕಂಡ ಕೂಡಲೇ ಅರಣ್ಯ ಇಲಾಖೆಗೆ ತಿಳಿಸಿ |

## ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ


ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

# ಮೊಸಳೆ



ಮಗ್ಗರ್ 　 ಉಪ್ಪು ನೀರಿನ ಮೊಸಳೆ 　 ಘಾರಿಯಲ್



## ಮಗ್ಗರ್




### IUCN ಸ್ಥಿತಿ ದುರ್ಬಲ


### ಆವಾಸಸ್ಥಾನ

ಸಿಹಿನೀರು ಮತ್ತು ಉಪ್ಪುನೀರಿನ ಪರಿಸರ ವ್ಯವಸ್ಥೆಗಳು

### ಸಂತತಿ

ಮೊಟ್ಟೆ ಇಡುವುದು ಫೆಬ್ರವರಿ - ಏಪ್ರಿಲ್

ಮೊಟ್ಟೆಯೊಡೆಯುವ ಅವಧಿ ಏಪ್ರಿಲ್ - ಜೂನ್





### ಸಂತಾನಾಭಿವೃದ್ಧಿಯ ವಯಸ್ಸು




- ನಿಶಾಚರಿ ಆದರೆ ಬೆಳಗಿನ ಸಮಯದಲ್ಲಿ ಕೂಡ ಬೇಟೆಯಾಡುತ್ತವೆ
- ಸಿಹಿನೀರಿನ ಕೆರೆ, ನದಿ ಮತ್ತು ಜವುಗು ಭೂಮಿಗಳಲ್ಲಿ ವಾಸಿಸುತ್ತವೆ
- ಭೂಮಿ ಮೇಲೆ ಮತ್ತು ನೀರಿನಲ್ಲಿ ಎರಡೂಕಡೆ ಬದುಕಬಲ್ಲವು
- ಸುಲಭವಾಗಿ ಗೋಚರಿಸುವುದಿಲ್ಲ; ತನ್ನನ್ನು ಮರೆಮಾಚಿಕೊಳ್ಳುತ್ತದೆ
- ಭೂಮಿಯ ಮೇಲೂ ಹಾಗೂ ನೀರಿನಲ್ಲಿ ಮುಳುಗಿದ್ದು ಮರೆಮಾಚಿಕೊಳ್ಳುತ್ತದೆ ಶೀತರಕ್ತ ಹೊಂದಿರುವಂತದ್ದು; ಮೈ ಬಿಸಿಯಾಗಿರಿಸುವುದಕ್ಕಾಗಿ ಸೂರ್ಯನ ಬಿಸಿಲಿಗೆ ದಡದಲ್ಲಿ ಮಲಗುತ್ತದೆ
- ಹೆಚ್ಚು ಬಿಸಿ ಅಥವಾ ಶೀತ ತಾಪಮಾನಗಳನ್ನು ಹಿಮ್ಮೆಟ್ಟಿಸಲು ಬಿಲಗಳನ್ನು ಅಗೆಯುತ್ತವೆ
- ಹಠಾತ್ತಾಗಿ ಮತ್ತು ಅತೀ ವೇಗವಾಗಿ ಹತ್ತಿರಕ್ಕೆ ಆಕ್ರಮಣ ಮಾಡಬಲ್ಲದು
- ಹರಿತವಾದ ಹಲ್ಲುಗಳಿರುತ್ತದೆ: ಮತ್ತು ಇನ್ನಿತರ ಪ್ರಾಣಿಗಳಿಗಿಂತ ಬಲವಾಗಿ ಕಡಿಯುತ್ತವೆ
- ಹೊಂಚು ಹಾಕುವ ಪರಭಕ್ಷಕಗಳು: ಬಲಿ ಪ್ರಾಣಿಗಳು ಹತ್ತಿರಕ್ಕೆ ಬರುವವರೆಗೂ ಕಾದು ಕುಳಿತು ಅನಿರೀಕ್ಷಿತ ದಾಳಿ ನಡೆಸುತ್ತದೆ
- ಪ್ರಚೋದಿಸಿದರೆ ಆಕ್ರಮಣಕಾರಿಯಾಗುತ್ತದೆ

### ಸರಾಸರಿ ಜೀವಿತಾವಧಿ







## ಘಾರಿಯಲ್

**IUCN ಸ್ಥಿತಿ : ವಿಮರ್ಶಾತ್ಮಕವಾಗಿ ಅಳಿವಿನಂಚಿನಲ್ಲಿರುವ ಪ್ರಾಣಿ**


- ಮನುಷ್ಯನಿಗೆ ನಿರುಪದ್ರವಿ; ಮೀನುಗಳನ್ನು ಬೇಟೆಯಾಡುತ್ತವೆ
- ಮೂತಿಯ ಮೇಲೆ ಮಡಕೆಯಾಕಾರ ಇರುವುದರಿಂದ ಘಾರ ಎಂದು ಹೆಸರು ಬಂದಿದೆ
- ಇವು ಶುದ್ಧ ಜಲಮೂಲಗಳ ಪ್ರಮುಖ ಸೂಚನೆಗಳು
- ಭೂಮಿಯ ಮೇಲೆ ತುಂಬಾ ದೂರದವರೆಗೂ ನಡೆಯಲಾಗುವುದಿಲ್ಲ ಮತ್ತು ಬೆದರಿಕೆ ಗೊಳಗಾದಾಗ ಇತರೆ ನೀರಿನ ಮಾರ್ಗಗಳನ್ನು ಬಳಸಲಾಗುವುದಿಲ್ಲ
- ಸಂತತಿಯಲ್ಲಿ ತೀವ್ರ ಕುಸಿತ ಕಂಡಿದೆ; ತೀವ್ರವಾಗಿ ಅಳಿವಿನಂಚಿನಲ್ಲಿದೆ

## ಉಪ್ಪು ನೀರಿನ ಮೊಸಳೆ

**IUCN ಸ್ಥಿತಿ : ಕನಿಷ್ಠ ಕಾಳಜಿ**

- ಅಧಿಕವಾಗಿ ಭಾರತದ ಪೂರ್ವ ಕರಾವಳಿ ಮತ್ತು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಕಂಡುಬರುತ್ತವೆ ನದೀಮುಖಗಳ ಲವಣಯುಕ್ತ ನೀರಿನಲ್ಲಿ ವಾಸಿಸುತ್ತದೆ
- ಭಾರತದಲ್ಲಿ ಅಪರೂಪ; ಆವಾಸ ಸ್ಥಾನದ ಅಡಚಣೆಯಿಂದಾಗಿ 1960 ರಲ್ಲಿ ಸಂತತಿ ತೀವ್ರವಾದ ಅವನತಿಗೆ ತಲುಪಿದೆ
- ಗೂಡುಗಳನ್ನು ಸಸ್ಯವರ್ಗದ ದಿಬ್ಬಗಳಲ್ಲಿ ನಿರ್ಮಿಸುತ್ತವೆ ಇದು ಮಗ್ಗರ್ಸ್ ಮತ್ತು ಘಾರಿಯಲ್ ಗಿಂತ ವಿಭಿನ್ನ






ಭಾರತದ ಒರಿಸ್ಸಾದಲ್ಲಿ ಮಾತ್ರ 3 ಜಾತಿಯ ಮೊಸಳೆಗಳಿವೆ



## ನಿಮಗಿದು ಗೊತ್ತೇ ?

- ಮಗ್ಗರ್ ನ ಇರುವಿಕೆ ಜಲಮೂಲಗಳ ಒಳ್ಳೆ ಆರೋಗ್ಯದ ಪ್ರಮುಖ ಸೂಚನೆಗಳು
- ಆವಾಸಸ್ಥಾನದ ನಾಶ, ಬೇಟೆ ಮತ್ತು ಪ್ರತೀಕಾರದ ಹತ್ಯೆಗಳು ಮಗ್ಗರ್ಸ್ ನ ಸಂತತಿ ಕಮ್ಮಿ ಆಗುವುದಕ್ಕೆ ಕಾರಣವಾಗಿದೆ
- ಉಷ್ಣವಲಯದ ಪೊದೆಗಳನ್ನು ಕೃಷಿ 'ಚಟುವಟಿಕೆಗಳಿಗೋಸ್ಕರ ಮತ್ತು ಜಲಚರ ಸಾಕಣೆಗಾಗಿ ಮೊಸಳೆಗಳ ಆವಾಸ ಸ್ಥಾನ ನಾಶವಾಗುತ್ತಿದೆ
- ಬರಗಾಲದ ಸಮಯದಲ್ಲಿ ಜಲಮೂಲಗಳನ್ನು ಹುಡುಕಿ ದೂರದಿಂದ ಬರುತ್ತವೆ
- ಮಗ್ಗರ್ ಗಳು ಒಂದು ಕಾಲದಲ್ಲಿ ವ್ಯಾಪಕವಾಗಿ ಮತ್ತು ಹೇರಳವಾಗಿದ್ದವು ಆದರೆ ಈಗ ಅದರ ಸಂತತಿ ತೀವ್ರವಾಗಿ ಕ್ಷೀಣಿಸಿದೆ
- ಅವುಗಳನ್ನು ಮಾಂಸಕ್ಕಾಗಿ ಮತ್ತು ಅದರ ಚರ್ಮಕ್ಕಾಗಿ ಕೊಲ್ಲಲಾಗುತ್ತಿದೆ
- ಜನರು ಜಾನುವಾರುಗಳನ್ನು ಮೊಸಳೆಯಿರುವ ಆವಾಸ ಸ್ಥಾನದಲ್ಲಿ ಮೇಯಿಸುವುದರಿಂದ ಸಂಘರ್ಷಕ್ಕೆ ಕಾರಣವಾಗುತ್ತಿದೆ
- ಪ್ರವಾಹದ ಸಮಯದಲ್ಲಿ ಮೊಸಳೆಗಳು ಕೊಚ್ಚಿಕೊಂಡು ಬೀದಿಗಳಲ್ಲಿ ನಗರ ಪ್ರದೇಶಗಳಿಗೆ ಬಂದುಬಿಡುತ್ತದೆ. ಪ್ರತ್ಯೇಕವಾಗಿ ಮಗ್ಗರ್ಸ್ಗಳು ಮಳೆಗಾಲದಲ್ಲಿ ಸೃಷ್ಟಿಯಾದ ತಾತ್ಕಾಲಿಕ ಕೆರೆಗಳ ಮುಖಾಂತರ ಪ್ರಯಾಣ ಮಾಡುತ್ತವೆ
- ಮರಿಗಳ ಲಿಂಗ ಕಾವಿನ ತಾಪಮಾನದ ಮೇಲೆ ಆಧಾರ ಪಟ್ಟಿರುತ್ತದೆ


**Indo-German Cooperation on Human-Wildlife Conflict Mitigation in India**
2017-2023
Taking a Harmonious Co-existence approach to Human-Wildlife Conflict Mitigation in India

# ನೀವು ಅನಿರೀಕ್ಷಿತವಾಗಿ



## ಮಾಡಬೇಕು

ನೀವು ಆನೆಗಳನ್ನು ಕಂಡ ಕೂಡಲೇ ನಿಧಾನವಾಗಿ ಚಲಿಸಿ ಮತ್ತು ಸುರಕ್ಷಿತ ಅಂತರ ಕಾಪಾಡಿಕೊಳ್ಳಿ

ಆನೆಗಳು ನಿಮ್ಮ ಬೆಳೆ, ಆಸ್ತಿ ಅಥವಾ ನಿಮ್ಮ ಪ್ರಾಣಕ್ಕೆ ಕುತ್ತು ತರಬಹುದು ಅನ್ನಿಸಿದಾಗ ದೊಡ್ಡ ಶಬ್ದ ಬರುವ ವಾದ್ಯಗಳನ್ನು ಬಳಸುವುದರಿಂದ ಆನೆಗಳನ್ನು ಓಡಿಸಬಹುದು

ವಾಹನ ಚಲಾಯಿಸುವಾಗ ರಸ್ತೆಯ ಬಳಿ ಆನೆಗಳನ್ನು ಕಂಡರೆ ಸುರಕ್ಷಿತ ಅಂತರದಲ್ಲೆ ವಾಹನಗಳನ್ನೂ ನಿಲ್ಲಿಸಿ ಮತ್ತು ಆನೆಗಳು ರಸ್ತೆ ದಾಟುತಿದ್ದರೆ ವಾಹನವನ್ನು ಹಿಂದಕ್ಕೆ ಚಲಿಸಿ, ಆನೆಗಳಿಗೆ ದಾಟುವುದಕ್ಕೆ ಅವಕಾಶ ಮಾಡಿಕೊಡಿ

ನೀವು ಅನೆಗಳಿರುವ ಪ್ರದೇಶದಲ್ಲಿ ಸಂಜೆ ಅಥವಾ ಸೂರ್ಯೋದಯಕ್ಕೂ ಮುಂಚೆ ಹಾದು ಹೋಗುತ್ತಿದ್ದರೆ ಜಾಗರೂಕರಾಗಿ ಮತ್ತು ನಿಧಾನವಾಗಿ ಚಲಿಸಿ

ಕೃಷಿ ಭೂಮಿಯನ್ನು ಆನೆಗಳ ದಾಳಿಯಿಂದ ತಪ್ಪಿಸಲು ಮುಳ್ಳಿನ ಪೊದೆಗಳನ್ನು ಬೇಲಿಗಳ ರೀತಿ ಮತ್ತು ಕಂದಕಗಳನ್ನು ಬಳಸಿ

ಮರಗಳಿಂದ ಮಾಗಿದ ಹಣ್ಣುಗಳನ್ನು ತೆಗೆಯಿರಿ, ಇದು ಆನೆಗಳನ್ನು ಆಕರ್ಷಿಸಬಹುದು

ನಿಮ್ಮ ಮನೆಯ ಹತ್ತಿರ ಆನೆಗಳ ಇರುವಿಕೆಯನ್ನು ನಿಧಾನವಾಗಿ ಮನೆಯೊಳಗೆ ಸೇರಿಕೊಳ್ಳಿ ಇದು ಆನೆಗಳು ಅಲ್ಲಿಂದ ಕಂಡ ಕೊಡಲೇ ಹೋಗುವುದಕ್ಕೆ ಅನುಕೂಲವಾಗುತ್ತದೆ

ಮಾನವನ ಆವಾಸಸ್ಥಾನದಲ್ಲಿ ಆನೆಗಳನ್ನು ಕಂಡಕೊಡಲೇ ಅರಣ್ಯ ಇಲಾಖೆಗೆ ತಿಳಿಸಿ

## ಮಾಡಬಾರದು

ಆನೆಗಳ ಹತ್ತಿರ ಫೋಟೋ ತೆಗೆಯಲು ಹೋಗಬೇಡಿ ಮತ್ತು ಆನೆಗಳಿಗೆ ತಿನ್ನಲು ಏನನ್ನು ಕೊಡಬೇಡಿ

ಆನೆಗಳನ್ನು ಬೆನ್ನಟ್ಟಬೇಡಿ ಅದು ನಿಮ್ಮ ಮೇಲೆ ದಾಳಿ ಮಾಡಬಹುದು

ರಸ್ತೆಯಲ್ಲಿ ಆನೆಗಳು ಎದುರಾದಾಗ ಹೆಚ್ಚು ಕಿರಣದ ದೀಪಗಳನ್ನು ಬಳಸಬೇಡಿ ಮತ್ತು ವಾಹನವನ್ನು ಆರಿಸಬೇಡಿ, ಆನೆ ನಿಮ್ಮ ಮೇಲೆ ದಾಳಿ ಮಾಡಲು ಯತ್ನಿಸಿದರೆ ವಾಹನವನ್ನು ಹಿಂದಕ್ಕೆ ಓಡಿಸಬೇಕಾಗುತ್ತದೆ


ಎಚ್ಚರಿಕೆ ಸಂಕೇತದ ನಾಮಫಲಕಗಳನ್ನು ನಿರ್ಲಕ್ಷಿಸದಿರಿ

ಕೃಷಿಭೂಮಿಯನ್ನು ಅಥವಾ ಬೆಳೆಗಳನ್ನು ಕಾವಲು ರಹಿತವಾಗಿ ಇರಿಸಬೇಡಿ

ದಿನಸಿ ಅಥವಾ ಆಹಾರ ಪದಾರ್ಥಗಳನ್ನು ಮನೆಯ ಹೊರಗಡೆ ಅಥವಾ ಮಣ್ಣಿನ ಮನೆಗಳಲ್ಲಿ ಶೇಖರಿಸಿಡಬೇಡಿ

ಆನೆಗಳ ಓಡಾಟ ಇರುವ ಸ್ಥಳದಲ್ಲಿ ನಿಮ್ಮ ಮನೆ ಇದ್ದರೆ ರಾತ್ರಿ ಹೊತ್ತು ಹೊರಗಡೆ ಸಂಚರಿಸಬೇಡಿ

ಆನೆಗಳ ಒಡಾಟವಿರುವ ಸ್ಥಳಗಳಿಗೆ ನೀವು ಹೋಗುವುದನ್ನು ತಪ್ಪಿಸಲು ಅರಣ್ಯ ಇಲಾಖೆಯ ಮಾಹಿತಿಗಳನ್ನು ಆಲಿಸಿ



ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

# ಏಷ್ಯಾದ ಆನೆ




26,000 ರಿಂದ- 29,000 ರವರೆಗೆ ಆನೆಗಳು ಭಾರತದಲ್ಲಿದೆ

## IUCN ಸ್ಥಿತಿ

ಅಳಿವಿನಂಚಿನಲ್ಲಿದೆ


## ಆನೆಗಳ ಆವಾಸಸ್ಥಾನ

ಹುಲ್ಲುಗಾವಲು, ಕುರುಚಲು ಮತ್ತು ಪತನಶೀಲ ಕಾಡುಗಳು



## ಆಹಾರ ಪದ್ಧತಿ

ಹುಲ್ಲು, ಕೊಂಬೆ, ಗಿಡ, ತೊಗಟೆ, ಚಿಗುರು, ಕಾಂಡ ಮತ್ತು ಪೊದೆಗಳು. ಪ್ರತಿ ದಿನ 250-300 ಕಿ.ಗ್ರಾಂ ಆಹಾರ ಸೇವಿಸುತ್ತದೆ




## ಜೀವಿತಾವಧಿ

60 ವರ್ಷಗಳು


## ಸಂತಾನಾಭಿವೃದ್ಧಿಯ ವಯಸ್ಸು

14 ವರ್ಷಗಳು

## ಗರ್ಭಾವಸ್ಥೆಯ ಅವಧಿ

18 - 22 ತಿಂಗಳು

## ಎತ್ತರ




## ತೂಕ

ಮರಿ: ಹುಟ್ಟಿದ ಮರಿ 100 ಕಿ.ಗ್ರಾಂ ಇರುತ್ತದೆ
ಹೆಣ್ಣಾನೆ: 2,500–4,500 ಕಿ.ಗ್ರಾಂ
ಗಂಡಾನೆ : 3,000–6,000 ಕಿ.ಗ್ರಾಂ

ಆನೆಗಳ = 1

## ನಿಮಗಿದು ಗೊತ್ತೇ?

- ಗಂಡಾನೆಗೆ ಮಾತ್ರ ದಂತಗಳಿರುತ್ತವೆ, ದಂತಗಳಿಲ್ಲದ ಗಂಡಾನೆಯನ್ನು ಮಖನ ಆನೆಗಳೆಂದು ಕರೆಯುತ್ತೇವೆ
- ಸೊಂಡಿಲುಗಳನ್ನು ಮೇಯಲು ಮತ್ತು ಹಿಡಿತಕ್ಕೆ ಬಳಸುತ್ತದೆ
- ಹಿಂಡನ್ನು ಹಿರಿಯ ಹೆಣ್ಣಾನೆ ನಿಯಂತ್ರಿಸುತ್ತದೆ, ಇವುಗಳನ್ನು ಮೆಟ್ರಿಯಾರ್ಕ್ (matriarch) ಎಂದು ಕರೆಯುತ್ತೇವೆ
- ಭಾರತದಲ್ಲಿ ಸಹಸ್ರಾರು ವರ್ಷಗಳಿಂದ ಆನೆಗಳನ್ನು ಹಿಡಿದು ಪಳಗಿಸುವುದು ರೂಢಿ ಯಲ್ಲಿದೆ
- ಬೆವರುಗ್ರಂಥಿ ಗಳಿಲ್ಲದಿರುವುದರಿಂದ ದೇಹವನ್ನು ತಂಪು ಮಾಡಲು ಮೈಮೇಲೆ ಕೆಸರನ್ನು ಎರಚಿಕೊಳ್ಳುತ್ತವೆ ಮತ್ತು ಕಿವಿಗಳನ್ನು ಬೀಸಣಿಗೆಯಂತೆ ಬಳಸಿಕೊಳ್ಳುತ್ತದೆ
- ಆನೆಗಳು ತಿಂದ ಆಹಾರದಲ್ಲಿ 40% ಮಾತ್ರ ಜೀರ್ಣಿಸುತ್ತದೆ, ಆದುದರಿಂದ ನಿರಂತರವಾಗಿ ತಿನ್ನುತ್ತಿರುತ್ತದೆ
- ನಿರ್ಜಲೀಕರಣವನ್ನು ತಪ್ಪಿಸುವುದಕ್ಕೆ ನೆರಳು ಅವಶ್ಯಕ
- ಪ್ರತಿದಿನ 200 ಲೀಟರ್ ಕಲುಷಿತವಲ್ಲದ ಮತ್ತು ಕುಡಿಯುವ ನೀರು ಬೇಕಾಗುತ್ತದೆ
- ಆನೆಗಳು ಅಣುಕಿಸುವ ಮತ್ತು ಉಪಕರಣಗಳನ್ನು ಬಳುಸುವಷ್ಟು ಜಾಣತನವನ್ನು ಪಡೆದಿದೆ

## ಪ್ರಮುಖ ಸಂಗತಿಗಳು

1. ಪ್ರತಿ ವರ್ಷ 100 ಆನೆಗಳು ಪ್ರತೀಕಾರಕ್ಕೆ ಮತ್ತು ದಂತಕ್ಕೋಸ್ಕರ ಕೊಲ್ಲಲ್ಪಡುತ್ತಿದೆ
2. ಎಲ್ಲಾ ಆನೆಗಳು ಬೆಳೆಗಳನ್ನು ಹಾಳುಮಾಡುವುದಿಲ್ಲ. ಮತ್ತು ಇದನ್ನು ಪರ್ಯಾಯ ಬೆಳೆಗಳನ್ನು ಬೆಳೆಯುವುದರಿಂದ ಹಾಗೂ ತಾತ್ಕಾಲಿಕ ಆನೆ ತಡೆ ಕಂದಕಗಳನ್ನು (ಬೆಳೆ ಕುಯ್ಲಿಗೆ ಬರುವಾಗ) ಮಾಡುವುದರಿಂದ ಸಂಘರ್ಷ ತಡೆಯಬಹುದಾಗಿದೆ
3. ಆನೆಗಳಿಂದಾಗುವ ಬಹುತೇಕ ದಾಳಿ ಹಠಾತ್ ಆಗಿ ಮನುಷ್ಯನು ತೀರ ಹತ್ತಿರಕ್ಕೆ ಆನೆಗಳನ್ನು ಸಮೀಪಿಸಿದಾಗ ನಡೆಯುತ್ತದೆ. ಮೊದಲೇ ಆನೆಯನ್ನು ಗುರುತಿಸಿ ಅಂತರ ಕಾಯ್ದುಕೊಳ್ಳುವುದರಿಂದ ಈ ಸಂಭವಗಳನ್ನು ತಪ್ಪಿಸಬಹುದು
4. ಅರಣ್ಯನಾಶ, ಕೃಷಿ ಭೂಮಿಯ ವಿಸ್ತರಣೆ ಮತ್ತು ಮಾನವನ ಅತಿಕ್ರಮಣ, ಆನೆ-ಮಾನವನ ಸಂಘರ್ಷಕ್ಕೆ ಮುಖ್ಯ ಕಾರಣ

## ವಲಸೆ

ವಲಸೆ ಬರುವ ದಾರಿಗಳನ್ನು ಅಥವಾ ಗಜಪಥಗಳನ್ನು "ಮೆಟ್ರಿಯಾರ್ಕ್" (**Matriarch**) ಗುಂಪಿನ ಹಿರಿಯ ಹೆಣ್ಣಾನೆ ಸರಿಯಾಗಿ ನೆನಪಿನಲ್ಲಿಟ್ಟುರತ್ತದೆ. ಆವಾಸ ಸ್ಥಾನಗಳ ವಿಘಟನೆ ಮತ್ತು ವಲಸೆ ಬರುವ ಹಾದಿಗಳ ಅಡಚಣೆಗಳಿಂದ ಹಾಗೂ ಮೆಟ್ರಿಯಾರ್ಕ್ ಅಥವಾ ವಯಸ್ಕ ಗಂಡಾನೆಯ ಸಾವು ಸಂಘರ್ಷಕ್ಕೆ ಕಾರಣವಾಗುತ್ತದೆ


ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

german cooperation DEUTSCHE ZUSAMMENARBEIT
Implemented by giz Deutsche Gesellschaft für Internationale Zusammenarbeit (GIZ) GmbH
Ministry of Environment, Forest and Climate Change Government of India
FOREST DEPARTMENT KARNATAKA
Directorate of Forests Government of West Bengal
LiFE Lifestyle for Environment
G20

# ಕಾಟಿಗಳನ್ನು ಕಂಡರೆ ಏನು ಮಾಡಬೇಕು ಮತ್ತು ಏನು ಮಾಡಬಾರದು



| ಮಾಡಬೇಕು ✓ | ಮಾಡಬಾರದು ✕ |
|---|---|
| ಕಾಟಿಗಳು ಮನುಷ್ಯನಿಂದ ದೂರವಿರಲು ಬಯಸುತ್ತವೆ, ಸುರಕ್ಷಿತ ಅಂತರ ಕಾಪಾಡಿಕೊಳ್ಳಿ | ಸಂಜೆ ಅಥವಾ ಸೂರ್ಯೋದಯಕ್ಕೂ ಮುನ್ನ ಅರಣ್ಯೇತರ ಪದಾರ್ಥಗಳು ಅಥವಾ ಜಾನುವಾರಿನ ಮೇವುಗಳಿಗಾಗಿ ಕಾಡಿಗೆ ಹೋಗಬೇಡಿ |
| ಕಾಡಿನಲ್ಲಿ ಒಬ್ಬರೇ ಸಂಚರಿಸ ಬೇಕಾದರೆ ಒಂದು ದೊಣ್ಣೆ ತೆಗೆದುಕೊಂಡು ಶಬ್ದ ಮಾಡುತ್ತಾ ನಡೆಯುವುದರಿಂದ ನಮ್ಮ ಬರುವಿಕೆಯನ್ನು ಗುರುತಿಸಿ ನಮ್ಮಿಂದ ದೂರ ಉಳಿಯುತ್ತದೆ | ಕಾಟಿಗಳನ್ನು ನೋಡಿದ ತಕ್ಷಣ ಹಠಾತ್ ಚಲನೆ ಅಥವಾ ಓಡಬೇಡಿ, ಕಾಟಿಗಳು ಬೆನ್ನಟ್ಟಬಲ್ಲದು ಮತ್ತು  ಗಾಯಗೊಳಿಸಬಹುದು. |
| ಕಾಡಿನಲ್ಲಿ ಒಬ್ಬರೇ ಸಂಚರಿಸ ಬೇಕಾದರೆ ಒಂದು ದೊಣ್ಣೆ ತೆಗೆದುಕೊಂಡು ಶಬ್ದ ಮಾಡುತ್ತಾ ನಡೆಯುವುದರಿಂದ ನಮ್ಮ ಬರುವಿಕೆಯನ್ನು ಗುರುತಿಸಿ ನಮ್ಮಿಂದ ದೂರ ಉಳಿಯುತ್ತದೆ | ಕಾಟಿಯ ಕರುಗಳ ಹತ್ತಿರ ಹೋಗಬೇಡಿ. ವಯಸ್ಕ ಕಾಟಿಗಳು ತನ್ನ ಕರುಗಳನ್ನು ರಕ್ಷಣಾತ್ಮಕವಾಗಿಟ್ಟಿರುತ್ತದೆ. |
| ಕಾಟಿಗಳನ್ನು ಓಡಿಸಲು ನೀವು ಸುರಕ್ಷಿತ ಪ್ರದೇಶದಲ್ಲಿ ನಿಂತು ದೊಡ್ಡ ಶಬ್ದ ಬರುವ ಡ್ರಮ್ ಗಳನ್ನು ಬಳಸಿ ಶಬ್ದ ಮಾಡಿ. | ಕಾಟಿಗಳು ನಮ್ಮ ಹಿಂದೆ ಓಡಿ ಬರುತ್ತಿದ್ದರೆ, ಮರದ ಹಿಂದೆಯೂ ಅಥವಾ ಬಂಡೆಯ ಹಿಂದೆಯೋ ಅಡಗಿ ಅಥವಾ ಮರ ಹತ್ತಬಹುದು. |
| ಕಾಟಿಗಳ ಪ್ರದೇಶದಲ್ಲಿ ವಾಹನವನ್ನು ನಿಧಾನವಾಗಿ ಚಲಿಸಿ ಮತ್ತು ಸುರಕ್ಷಿತ ಅಂತರ ಕಾಪಾಡಿಕೊಳ್ಳಿ | ವಾಹನಗಳಿಂದ ಇಳಿಯಬೇಡಿ ಅಥವಾ ಅದನ್ನು ಹಿಂಬಾಲಿಸಬೇಡಿ ಇದು ಅವನ್ನು ತಳಮಳವಾಗಿಸುತ್ತದೆ |
| ಹಳ್ಳಿಯಲ್ಲಿ ಅಥವಾ ರಸ್ತೆಯಲ್ಲಿ ಕಾಟಿ ಇದ್ದರೆ ಶಾಂತವಾಗಿರಿ. ಕಾಟಿಗಳು ಹಾದುಹೋಗುವವರೆಗೆ ಕಾಯಿರಿ ಅಥವಾ ಪಕ್ಕಕ್ಕೆ ಚಲಿಸುವ ಮೂಲಕ ಅದಕ್ಕೆ ಜಾಗವನ್ನು ಬಿಡಿ ಇದರಿಂದ ನೀವು ಪ್ರಾಣಿಗೆ ತೊಂದರೆ ನೀಡುವುದಿಲ್ಲ | ಕಾಟಿಗಳ ದಾರಿಗಳನ್ನು ತಡೆಹಿಡಿಯಬೇಡಿ ಇದು ಅದರ ಸಾಗಣೆ ದಾರಿಯನ್ನು ಬದಲಿಸಿ ತಳಮಳವನ್ನುಂಟು ಮಾಡುತ್ತದೆ |
| ಕೃಷಿ ತ್ಯಾಜ್ಯ ಮತ್ತು ಆಹಾರ ತ್ಯಾಜ್ಯವನ್ನು ಮುಚ್ಚುವುದರಿಂದ ಅಥವಾ ಗೊಬ್ಬರಗಳಾಗಿ ಮತ್ತು ಸುಸ್ಥಿರ ತ್ಯಾಜ್ಯ ವಿಲೇವಾರಿ ವಿಧಾನಗಳು ಮಾಡುವುದು ಉತ್ತಮ | ಕಾಟಿಗಳನ್ನು ಹಿಮ್ಮೆಟ್ಟಿಸುವುದಕ್ಕೆ ಕಲ್ಲುಗಳನ್ನು ಎಸೆಯಬೇಡಿ, ಅವು ತಮ್ಮ ರಕ್ಷಣೆಗೆ ನಮ್ಮ ಮೇಲೆ ದಾಳಿ ಮಾಡಬಹುದು |
| ಗಾಯಗೊಂಡಿದ್ದರೆ ತಕ್ಷಣವಾಗಿ ಹತ್ತಿರದ ಆಸ್ಪತ್ರೆಗೆ ದಾಖಲಾಗಿ. | ಕಸದ ರಾಶಿಯನ್ನು ಕೃಷಿ ಭೂಮಿಯ ಹತ್ತಿರ ಅಥವಾ ಹಳ್ಳಿಯ ಪರಿಮಿತಿಯಲ್ಲಿ ಹಾಕಬೇಡಿ ಇದು ಕಾಟಿಗಳನ್ನು ಆಕರ್ಷಿಸುತ್ತವೆ |


## ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ


ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

# ಕಾಟಿ

## ಸ್ಥಿತಿ ದುರ್ಬಲ






**ಆವಾಸಸ್ಥಾನ** ಅರಣ್ಯ, ಬೆಟ್ಟ ಮತ್ತು ಹುಲ್ಲುಗಾವಲು ಪ್ರದೇಶಗಳು

**ಸಂತತಿ**


| | |
|---|---|
| ವಿಶ್ವಾದ್ಯಂತ | ಅಂದಾಜು 30,000 |
| ಭಾರತ | ಅಂದಾಜು 28,000 |




- ಇವುಗಳು ಬದುಕುಳಿದಿರುವ ಎತ್ತರದ ಮತ್ತು ತೂಕವುಳ್ಳ ಎತ್ತುಗಳ ಜಾತಿಗೆ ಸೇರಿವೆ
- ಲೈಂಗಿಕವಾಗಿ ಇವು ದ್ವಿರೂಪ ಗಂಡು ಮತ್ತು ಹೆಣ್ಣುಗಳಿಗೆ ಕೊಂಬುಗಳಿರುತ್ತವೆ
- ವಯಸ್ಕ ಗಂಡುಗಳಿಗೆ ಹೊಳಪಾದ ಕಪ್ಪು ಕೂದಲಿದ್ದು, ಸಡಿಲವಾದ ಚರ್ಮವು ಗಂಟಲಿನಿಂದ ಮುಂಗಾಲುಗಳವರೆಗೆ ನೇತಾಡುತ್ತಿರುತ್ತದೆ
- ವಯಸ್ಕ ಹೆಣ್ಣುಗಳು ಗಾಢ ಕಂದು ಬಣ್ಣದಿಂದ ಕೂಡಿದ್ದು ತೆಳುವಾದ ಕೊಂಬುಗಳಿರುತ್ತದೆ
- ಹೆಚ್ಚು ಬೆಳಿಗ್ಗೆ ಮತ್ತು ಸಂಜೆ ಸಕ್ರಿಯವಾಗಿರುತ್ತದೆ; ಮಾನವನಿಂದ ತೊಂದರೆಗೊಳಗಾದ ಪ್ರದೇಶಗಳಲ್ಲಿ ಕತ್ತಲಲ್ಲಿ ಸಕ್ರಿಯವಾಗುತ್ತದೆ
- ಬೆದರಿಕೆಗೊಳಗಾದರೆ ತಲೆಯನ್ನು ಬಗ್ಗಿಸಿ ಕೊಂಬುಗಳನ್ನು ಹಿಂಬಾಗವಾಗಿ ಮಾಡಿ ದಾಳಿ ಮಾಡುತ್ತವೆ
- ಎಚ್ಚರಿಕೆಯ ಕರೆಗೆ 'ಶಿಳ್ಳೆ' ಯಂತಹ ಶಬ್ದವನ್ನು ಮಾಡುತ್ತದೆ
- ದೊಡ್ಡ ಗಾತ್ರ ಹೊಂದಿದ್ದರೂ ಅತೀ ನಾಚಿಕೆ ಮತ್ತು ಶಾಂತವಾಗಿರುವ ಪ್ರಾಣಿ
- ಪ್ರಚೋದನೆ ಅಥವಾ ತೀರ ಹತ್ತಿರಕ್ಕೆ ಸಮೀಪಿಸದ ಹೊರತು ಆಕ್ರಮಣ ಮಾಡುವುದಿಲ್ಲ

## ಸಂತಾನಾಭಿವೃದ್ಧಿ ಸಮಯ

ವರ್ಷವಿಡೀ ಸಂತಾನೋತ್ಪತ್ತಿ ನಡೆಸುತ್ತದೆ ಅತೀ ಹೆಚ್ಚು ಡಿಸೆಂಬರ್ ಮತ್ತು ಜೂನ್ ನಡುವೆ ನಡೆಯುತ್ತದೆ
ಸಂತಾನಾಭಿವೃದ್ಧಿಯ ಸಮಯದಲ್ಲಿ ಗಂಡಿನ ಕೂಗು 1.6 ಕಿ. ಮೀ ದೂರದವರೆಗೆ ಕೇಳಿಸುತ್ತದೆ





## ಸರಾಸರಿ ಜೀವಿತಾವಧಿ





## ಸಂತಾನಾಭಿವೃದ್ಧಿಯ ವಯಸ್ಸು

2-3 ವರ್ಷಗಳು
ಗರ್ಭಾವಸ್ಥೆಯ ಅವಧಿ:
9 ತಿಂಗಳು → ಪ್ರತಿ 1-1.5 ವರ್ಷಕ್ಕೆ ಒಂದು ಹೆಣ್ಣು ಸಂತಾನೋತ್ಪತ್ತಿ ನಡೆಸುತ್ತದೆ
↓
ಒಂದು ಸಲಕ್ಕೆ 1 ಕರು
ತೂಕ : 23 kg





## ಗುಂಪಿನ ರಚನೆ

ಒಂದು ಆವಾಸಸ್ಥಾನಕ್ಕೂ ಇನ್ನೊಂದು ಆವಾಸಸ್ಥಾನಕ್ಕೂ ಮತ್ತು ಋತುಗಳಿಗು ಬದಲಾಗುತ್ತಾ ಹೋಗುತ್ತವೆ
ಒಂದು ಗಂಡಿನ ಜೊತೆ 8-11 ಹೆಣ್ಣುಗಳಿರುತ್ತವೆ
**ಸಂಯೋಗದ ಅವಧಿಯಲ್ಲಿ:**
ಹೆಚ್ಚು ಗಂಡುಗಳು ಗುಂಪನ್ನು ಸೇರುತ್ತವೆ
**ಸಂಯೋಗದ ನಂತರದ ಅವಧಿ:**
ಗಂಡು ಗುಂಪನ್ನು ಬಿಟ್ಟು ಹೊರಟು ಹೋಗುತ್ತವೆ




## ಆಹಾರ ಪದ್ಧತಿ




**ಗರಿಷ್ಠ ತೂಕ - 1,000 kg**

**ಗರಿಷ್ಠ ಎತ್ತರ - 1.9 m**





## ನಿಮಗಿದು ಗೊತ್ತೇ?


- ಕಾಟಿಗಳು ಸಸ್ಯ ಸಮುದಾಯಗಳ ನಿಯಂತ್ರಣ ಮತ್ತು ನಿರ್ಣಾಯಕ ಪರಿಸರ ವ್ಯವಸ್ಥೆಯ ಸೇವೆಗಳನ್ನು ಮತ್ತು ಭೂದೃಶ್ಯ ಬದಲಾವಣೆ ಆಗದ ತರಹ ನೋಡಿಕೊಳ್ಳುತ್ತದೆ
- ಕಾಟಿಗಳನ್ನು ಕೊಂಬಿಗಾಗಿ, ಕ್ರೀಡೆಗಾಗಿ ಕೆಲವೆಡೆ ಮಾಂಸಕ್ಕಾಗಿ ಬೇಟೆ ಆಡುತ್ತಾರೆ
- ಕಾಟಿಗಳು ಜಾನುವಾರುಗಳಿಗೆ ಬರುವ ಕಾಲು-ಬಾಯಿ ಜ್ವರ ದಂತಹ ಕಾಯಿಲೆಗಳಿಗೆ ತುತ್ತಾಗುತ್ತವೆ
- ಆವಾಸ ಸ್ಥಾನದ ನಾಶ ಅವುಗಳ ಸಂತತಿ ಕಮ್ಮಿ ಆಗಲು ಬಹುದೊಡ್ಡ ಕಾರಣ
- ಮೊದಲಿಗೆ ಮನುಷ್ಯ ಮತ್ತು ಕಾಟಿಗಳ ಸಂಘರ್ಷ ಅತೀ ಕಡಿಮೆ ಪ್ರಮಾಣದಲ್ಲಿತ್ತು. ಆವಾಸಸ್ಥಾನದ ನಾಶದಿಂದ ಸಂಘರ್ಷ ಹೆಚ್ಚಾಗಿದೆ
- ಕಾಟಿಗಳು ನಾಚಿಕೆಯುಳ್ಳ ಪ್ರಾಣಿಗಳಾಗಿದ್ದರಿಂದ ಸಂಘರ್ಷ ಕಾಡಂಚಿನ ಗ್ರಾಮಗಳಲ್ಲಿ ಅಥವಾ ಅತಿಕ್ರಮಣದ ಭೂಮಿಗಳಲ್ಲಿ ಬೆಳೆಹಾನಿಗೆ ಸ್ಥಿಮಿತವಾಗಿದೆ
- ಮನುಷ್ಯ ಕಾಟಿಗಳ ಸಂಘರ್ಷ ತಪ್ಪಿಸುವುದಕ್ಕೆ ನಶಿಸುತ್ತಿರುವ ಆವಾಸ ಸ್ಥಾನಗಳು ಪುನರುತ್ಪಾದನೆ ಆಗಬೇಕಾಗಿದೆ

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

# ಚಿರತೆ



ಏಷ್ಯಾದಲ್ಲಿ ಆವಾಸಸ್ಥಾನ



ಭಾರತದಲ್ಲಿ

**12,000-14,000**

ಚಿರತೆಗಳ ಸಂತತಿ ಇದೆ


ಸ್ಥಿತಿ : ಅಳಿವಿನಂಚಿನಲ್ಲಿದೆ




## ಸಂತಾನಾಭಿವೃದ್ಧಿ ಸಮಯ

- ಬಲಿಪ್ರಾಣಿಗಳ ಸಂತಾನೋತ್ಪತ್ತಿಯ ಸಮಯದಲ್ಲಿ ಇವುಗಳು ಮರಿಹಾಕುತ್ತವೆ
- ವರ್ಷವಿಡೀ ಸಂತಾನೋತ್ಪತ್ತಿ ನಡೆಸುತ್ತದೆ ಅತೀ ಹೆಚ್ಚು ಡಿಸೆಂಬರ್ ನಲ್ಲಿ ನಡೆಯುತ್ತದೆ


## ಸರಾಸರಿ ಜೀವಿತಾವಧಿ




## ಸಂತಾನಾಭಿವೃದ್ಧಿಯ ವಯಸ್ಸು


ಹೆಣ್ಣು : 18 ರಿಂದ 36 ತಿಂಗಳು
ಗಂಡು : 24 ರಿಂದ 28 ತಿಂಗಳು

## ಗರ್ಭಾವಸ್ಥೆಯ ಅವಧಿ



**3 - 3.5** ತಿಂಗಳು ➡ **1 - 2** ವರ್ಷಕ್ಕೊಮ್ಮೆ ಮರಿ ಹಾಕುತ್ತವೆ


## ಚಿರತೆ ಮರಿಗಳು



2-3 ಮರಿಗಳು

- ಏಕಾಂಗಿ ಹಾಗೂ ಪ್ರಾದೇಶಿಕ ಗಡಿಗಳ ಒಳಗಡೆ ಜೀವನವನ್ನು ನಡೆಸುವಂತಹ ಪ್ರಾಣಿ
- ಮೂಲತಃ ನಿಶಾಚರಿ ಆದರೆ ಹಗಲಲ್ಲು ಸಕ್ರಿಯವಾಗಬಲ್ಲದು. ವಾಸನೆ ಮತ್ತು ಗರ್ಜಿಸುವ ಮೂಲಕ ತನ್ನ ಉಗುರುಗಳಿಂದ ಮರಗಳನ್ನು ಕೆರೆಯುವುದರಿಂದ ಗಡಿಗಳನ್ನು ಗುರುತು ಮಾಡುತ್ತವೆ
- ಹೊಂಚುಹಾಕಿ ಬೇಟೆ ನಡೆಸುತ್ತವೆ ಮತ್ತು ಪೊದೆಗಳು ಹಾಗೂ ಕತ್ತಲೆಯಲ್ಲಿ ಕಾದು ಕುಳಿತು ಬೇಟೆಯ ಮೇಲೆ ಆಕ್ರಮಣ ಮಾಡುತ್ತದೆ
- ಮರದ ಮೇಲೆ ಕುಳಿತು ಬಲಿ ಪ್ರಾಣಿಗಳನ್ನು ಗುರುತಿಸಿ ಬೇಟೆ ನಡೆಸುತ್ತವೆ
- ಚಿರತೆಗಳು ಕೊಂದ ದೊಡ್ಡ ಬಲಿ ಪ್ರಾಣಿಗಳನ್ನು ಎಳೆದುಕೊಂಡು ಮರದ ಮೇಲೆ ಹತ್ತುವಷ್ಟು ಬಲಿಷ್ಟವಾಗಿದೆ
- ಚಿರತೆಗಳು ಉತ್ತಮವಾಗಿ ಈಜುತ್ತವೆ, ಮೀನು ಅಥವಾ ಏಡಿಗಳನ್ನು ಕೂಡ ಬೇಟೆ ಆಡುತ್ತವೆ
- ಮನುಷ್ಯನ ಆವಾಸಸ್ಥಾನ ಅಥವಾ ಮಾನವ ಪ್ರಾಬಲ್ಯದ ಸ್ಥಳಗಳಲ್ಲಿ ಬದುಕುಳಿಯುವ ಕೌಶಲ್ಯವನ್ನು ರೂಡಿಸಿಕೊಂಡಿದೆ
- ಮನುಷ್ಯನ ಆವಾಸಸ್ಥಾನ ಅಥವಾ ಮಾನವ ಪ್ರಾಬಲ್ಯದ ಸ್ಥಳಗಳಲ್ಲಿ ಬದುಕುಳಿಯುವ ಕೌಶಲ್ಯವನ್ನು ರೂಡಿಸಿಕೊಂಡಿದೆ
- ಮಾನವನ ಆಹಾರ ತ್ಯಾಜ್ಯಗಳಿಗೆ ಆಕರ್ಷಣೆಯಾಗುವ ನಾಯಿ ಅಥವಾ ಜಾನುವಾರುಗಳ ಮೇಲೆ ಆಕ್ರಮಣ ಮಾಡುತ್ತವೆ

## ನಿಮಗಿದು ಗೊತ್ತೇ?



- ಚಿರತೆ ಮೈ ಮೇಲಿರುವ ಚುಕ್ಕಿಗಳಿಗೆ ರೋಸೆಟ್ಸ್ ಎನ್ನುತ್ತಾರೆ. ಇದು ತನ್ನನ್ನು ಪರಿಸರದಲ್ಲಿ ಮರೆಮಾಚಲು ಉಪಯೋಗವಾಗುತ್ತದೆ
- (ಮೆಲನಿಸ್ಟಿಕ್) ಕಪ್ಪು ಚಿರತೆಗಳಿಗೂ ಚುಕ್ಕೆಗಳಿರುತ್ತವೆ, ಮೈಮೇಲಿನ ಕಪ್ಪು ಬಣ್ಣದಿಂದ ಸುಲಭವಾಗಿ ಕಾಣುವುದಿಲ್ಲ
- ಚಿರತೆಗಳು ಪರಿಸರದ ಸಮತೋಲನೆ ಕಾಪಾಡುವಲ್ಲಿ ಮುಖ್ಯ ಪಾತ್ರವಹಿಸುತ್ತದೆ, ಇದರಿಂದ ಮಾನವನಿಗೆ ನೈಸರ್ಗಿಕ ಸಂಪನ್ಮೂಲಗಳಾದ ಆಹಾರ,ನೀರು ಹೆಚ್ಚಾಗಿಸಿಗುತ್ತದೆ
- ಚಿರತೆಗಳು ಅವಕಾಶವಾದಿಗಳು ಯಾವುದೇ ಸಣ್ಣ ಪ್ರಾಣಿಗಳನ್ನು ಬೇಟೆಯಾಡಬಲ್ಲದು, ಹಾಗೂ ಹಿಂದೆಂದೂ ಬೇಟೆಯಾಡದೆ ಇರುವ ಚಿಕ್ಕ ಮಕ್ಕಳು ಅಥವಾ ವೃದ್ಧರನ್ನು ಕೂಡ
- ಬಹುಪಾಲು ಮನುಷ್ಯನ ಮೇಲೆ ಆಗುವ ದಾಳಿಗಳು ಆಕಸ್ಮಿಕವಾಗಿ ಅಥವಾ ಮನುಷ್ಯರು ಚಿರತೆಯನ್ನು ಸುತ್ತುವರೆಯುವುದರಿಂದ ನಡೆಯುತ್ತದೆ
- ಚಿರತೆಗಳು ಅದರ ಸುಲಭವಾದ ಬಲಿಪ್ರಾಣಿಗಳಿಗೆ ಆದ್ಯತೆ ಕೊಡುತ್ತದೆ. ಮತ್ತು ಸ್ವಾಭಾವಿಕ ಬಲಿಪ್ರಾಣಿಗಳ ಕೊರತೆಯಿಂದ ನಾಯಿಗಳು ಅಥವಾ ಜಾನುವಾರುಗಳನ್ನು ಬೇಟೆಯಾಡುತ್ತವೆ
- ಜಾನುವಾರುಗಳನ್ನು ಕಾಡಿಗೆ ಮೇಯಲು ಬಿಡುವುದರಿಂದ ಮನುಷ್ಯ ಮತ್ತು ಚಿರತೆಗಳ ನಡುವೆ ಸಂಘರ್ಷ ಹೆಚ್ಚಾಗುತ್ತದೆ
- ಕಾಡಿನ ನಾಶ ಸ್ವಾಭಾವಿಕ ಬಲಿ ಪ್ರಾಣಿಗಳ ಕೊರತೆ ಮತ್ತು ಬಲಿಷ್ಠ ಚಿರತೆಗಳಿಂದ ವಯಸ್ಕ ಚಿರತೆಗಳು ಮನುಷ್ಯನ ಆವಾಸ ಸ್ಥಾನಕ್ಕೆ ತಳ್ಳಲ್ಪಡುತ್ತವೆ


**ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ**

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು



# ಚಿರತೆಗಳನ್ನು ಕಂಡ ತಕ್ಷಣ ಏನು ಮಾಡಬೇಕು ಮತ್ತು ಏನು ಮಾಡಬಾರದು

| ಮಾಡಬೇಕು ✓ | ಮಾಡಬಾರದು ✕ |
|---|---|
| ಚಿರತೆಗಳಿರುವ ಪ್ರದೇಶದಲ್ಲಿ ಗುಂಪು ಗುಂಪಾಗಿ ಶಬ್ದ ಮಾಡುತ್ತಾ ಸಂಚರಿಸುವುದು ಒಳಿತು, ನಮ್ಮ ಇರುವಿಕೆ ತಿಳಿದ ಪ್ರಾಣಿಗಳು ಅಲ್ಲಿಂದ ಹೊರಟು ಹೋಗುತ್ತವೆ | ಕತ್ತಲಾಗುವಾಗ ಅಥವಾ ಸೂರ್ಯೋದಯಕ್ಕೂ ಮುನ್ನ ಜಾನುವಾರುಗಳನ್ನು ಕಾಡಿನ ಸುತ್ತ ಮುತ್ತ ಮೇಯಲು ಬಿಡಬೇಡಿ |
| ಜಾನುವಾರುಗಳನ್ನು ಮೇಯಲು ಕಾಡಿಗೆ ಬಿಡುವ ಬದಲು, ಕೊಟ್ಟಿಗೆಯಲ್ಲಿ ಮೇವು ನೀಡುವುದು ಉತ್ತಮ | ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಚಿರತೆ ಕಂಡುಬಂದಲ್ಲಿ ಆ ಸ್ಥಳಕ್ಕೆ ಹೋಗಬೇಡಿ ಮತ್ತು ಎಲ್ಲರಿಗೂ ಇದನ್ನು ತಿಳಿಸಿ, ಚಿರತೆಗಳು ತಾನಾಗಿಯೇ ಆ ಸ್ಥಳವನ್ನು ಬಿಟ್ಟು ಹೊರಟುಹೋಗಬಹುದು |
| ನಿಮ್ಮ ದಾರಿಯಲ್ಲಿ ಚಿರತೆಯನ್ನು ಕಂಡರೆ ಅಂತರವನ್ನು ಕಾಪಾಡಿಕೊಂಡು ದೂರ ಉಳಿಯುವುದು ಸೂಕ್ತ | ಚಿರತೆಗಳ ಇರುವಿಕೆ ಇರುವ ಸುತ್ತಮುತ್ತಲ ಪರಿಸರದಲ್ಲಿ ಅಥವಾ ಹಳ್ಳಿಯ ರಸ್ತೆಗಳಲ್ಲಿ ಮಕ್ಕಳನ್ನು ಓಡಾಡಲು ಬಿಡಬೇಡಿ |
| ಎಲ್ಲಾ ಜಾನುವಾರುಗಳನ್ನು ಸುರಕ್ಷಿತವಾಗಿ ಚಿರತೆ ನಿರೋಧಕ ಗ್ರಿಲ್ ಗಳೊಳಗೆ ಇಡಿ | ರಾತ್ರಿಯಲ್ಲಿ ಸಾಕು ನಾಯಿಗಳನ್ನು ಮನೆಯ ಈಚೆ ಕಟ್ಟುವುದರಿಂದ ಚಿರತೆಗಳು ಆಕರ್ಷಿತವಾಗಬಹುದು |
| ಮಾನವನ ಅಹಾರ ತ್ಯಾಜ್ಯ  ಕಸಗಳನ್ನು ಆಗಾಗಲೇ ವಿಲೇವಾರಿ ಮಾಡಿ, ಇದು ನಾಯಿಗಳನ್ನು ಮತ್ತು ಇನ್ನಿತರ  ಪ್ರಾಣಿಗಳನ್ನು ಸೆಳೆಯುತ್ತವೆ ಮತ್ತು ಚಿರತೆಗಳು ಇವುಗಳಿಗೆ ಆಕರ್ಷಿತವಾಗುತ್ತವೆ | ಮಕ್ಕಳನ್ನು ಮತ್ತು ಹಿರಿಯ ನಾಗರಿಕರನ್ನು ಕತ್ತಲಲ್ಲಿ ಈಚೆ ಹೋಗಲು ಬಿಡಬೇಡಿ |
| ಮಾನವನ ಅಹಾರ ತ್ಯಾಜ್ಯ  ಕಸಗಳನ್ನು ಆಗಾಗಲೇ ವಿಲೇವಾರಿ ಮಾಡಿ, ಇದು ನಾಯಿಗಳನ್ನು ಮತ್ತು ಇನ್ನಿತರ  ಪ್ರಾಣಿಗಳನ್ನು ಸೆಳೆಯುತ್ತವೆ ಮತ್ತು ಚಿರತೆಗಳು  ಇವುಗಳಿಗೆ ಆಕರ್ಷಿತವಾಗುತ್ತವೆ | ಚಿರತೆಯ ಮುಂದೆ ಯಾವುದೇ ಆಘಾತಕಾರಿ ಅಥವಾ ಆಕ್ರಮಣಕಾರಿಯಾಗಿ ವರ್ತಿಸಬೇಡಿ, ಏಕೆಂದರೆ ನಾವು ಬಲಿ ಪ್ರಾಣಿಯೆಂದು ನಮ್ಮ ಮೇಲೆ ಆಕ್ರಮಣ ಮಾಡಬಹುದು |
| ಸಂಜೆ ಅಥವಾ ರಾತ್ರಿಯ ವೇಳೆ ಮನೆಯ ಹೊರಾಂಗಣದಲ್ಲಿ ವಿದ್ಯುತ್ ಬಲ್ಬ್ ಗಳನ್ನು ಬಳಸಿ, ರಾತ್ರಿವೇಳೆ ಹೊರಗಡೆ  ಹೋಗುವಾಗ ಟಾರ್ಚ್ ಲೈಟ್ ಅನ್ನು ಬಳಸಿ | ತೆರೆದ ಪರಿಸರದಲ್ಲಿ ಮಲವಿಸರ್ಜನೆ ಮಾಡುವುದನ್ನು ತಪ್ಪಿಸಿ, ಮತ್ತು ಶೌಚಾಲಯ ಬಳಸಿ |
| ಚಿರತೆ ಮರಿಗಳೇನಾದರು ಕಂಡರೆ ಕೂಡಲೇ ಅರಣ್ಯ ಇಲಾಖೆಗೆ ತಿಳಿಸಿ, ಅದನ್ನು ಎತ್ತಿಕೊಳ್ಳುವ ಪ್ರಯತ್ನ ಮಾಡಬೇಡಿ ತಾಯಿ ಚಿರತೆ ಹತ್ತಿರದಲ್ಲೆ ಇದ್ದು ನಮ್ಮ ಮೇಲೆ ಆಕ್ರಮಣ ಮಾಡುವ ಸಾಧ್ಯತೆ ಇರುತ್ತದೆ | ಚಿರತೆಗಳ ರಕ್ಷಣಾ ಕಾರ್ಯಾಚರಣೆ ನಡೆಯುವಾಗ ಗುಂಪುಕಟ್ಟಿಕೊಂಡು ನಿಲ್ಲುವುದು ಮತ್ತು ಫೋಟೋ ತೆಗೆಯಲು ಪ್ರಯತ್ನಿಸುವುದು ಮಾಡಬೇಡಿ. ರಕ್ಷಣಾ ತಂಡಕ್ಕೆ ತೊಂದರೆ ಕೊಡದೆ ದೂರ ನಿಲ್ಲುವುದು ಒಳಿತು |
| ಚಿರತೆಗಳು ಮನುಷ್ಯ ವಸತಿಗಳ  ಹತ್ತಿರ ಕಂಡ ತಕ್ಷಣ ಅರಣ್ಯ ಇಲಾಖೆಗೆ ಕರೆಮಾಡಿ | ಚಿರತೆಗಳು ಮನುಷ್ಯನ ವಸತಿಗಳ ಹತ್ತಿರ ಬಂದರೆ ಅದರ ಹತ್ತಿರ ಹೋಗಬೇಡಿ, ಇದನ್ನು ಚಿರತೆಗಳು ಅಪಾಯದ ಮುನ್ಸೂಚನೆ  ಎಂದು ಭಾವಿಸಿ ಆಕ್ರಮಣ ಮಾಡುತ್ತದೆ |

## ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

# ಕೋತಿಗಳು ಅನಿರೀಕ್ಷಿತವಾಗಿ ಸಮೀಪಿಸಿದರೆ ಏನು ಮಾಡಬೇಕು ಮತ್ತು ಏನು ಮಾಡಬಾರದು



| ಮಾಡಬೇಕು ✓ | ಮಾಡಬಾರದು ✕ |
|---|---|
| ಕೋತಿಗಳನ್ನು ನಿಮ್ಮ ಸಮೀಪದಿಂದ ಓಡಿಸಲು ದೊಡ್ಡ ಶಬ್ದ ಹೊಮ್ಮಿಸುವ ಡ್ರಮ್ ಗಳನ್ನು ಬಳಸಿ | ಕೋತಿಗಳ ಕಣ್ಣಲ್ಲಿ ಕಣ್ಣಿಟ್ಟು ದೃಷ್ಟಿಸಬೇಡಿ ಮತ್ತು ಕಲ್ಲುಗಳಿಂದ ಹೊಡೆಯಬೇಡಿ ಅದು ಆಕ್ರಮಣಕ್ಕೆ ದಾರಿ ಮಾಡಿಕೊಡುತ್ತದೆ |
| ಕೋತಿಗಳಿಂದ ಸುರಕ್ಷಿತ ಅಂತರವನ್ನು ಕಾಪಾಡಿಕೊಳ್ಳಿ ಮತ್ತು ಮೊದಲು ಅವುಗಳಿಗೆ ಹೋಗಲು ದಾರಿ ಮಾಡಿಕೊಡಿ | ಕೋತಿಗಳಿಗೆ ದೊಣ್ಣೆಗಳಿಂದ ಹೊಡೆಯಬೇಡಿ, ಅದು ಆಕ್ರಮಣಕ್ಕೆ ದಾರಿ ಮಾಡುತ್ತದೆ |
| ಕೋತಿಗಳಿರುವ ಕಡೆ ಗುಂಪಿನಲ್ಲಿ ಓಡಾಡಿ | ನಗಬೇಡಿ, ಹಲ್ಲುಗಳನ್ನು ತೋರಿಸುವುದರಿಂದ ಕೋತಿಗಳು ಅವನ್ನು ಬೆದರಿಕೆ ಎಂದು ಭಾವಿಸಿ ಆಕ್ರಮಣ ಮಾಡುತ್ತದೆ. ಮತ್ತು ಕೋತಿಗಳನ್ನು ಹಂಗಿಸಬೇಡಿ |
| ಕೋತಿಗಳ ಆಕ್ರಮಣಕಾರಿ ನಡವಳಿಕೆಗಳ ಬಗ್ಗೆ ಗಮನವಿರಲಿ, ವಿವಿಧ ಆಕ್ರಮಣಶೀಲತೆಯನ್ನು ತೋರಿಸುತ್ತದೆ ಜೋರಾಗಿ ಗೊಣಗುವ ಶಬ್ದದಿಂದ ಶುರುಮಾಡಿ, ಮೊಣಕಾಲುಗಳನ್ನು ಹಿಡಿಯುವುದು ಮತ್ತು ಆಕ್ರಮಣಕಾರಿಯಾಗಿ ಕಚ್ಚುತ್ತದೆ | ಓಡಬೇಡಿ ಮತ್ತು ಭಯವನ್ನು ತೋರಿಸಬೇಡಿ ಇದು ನಿಮ್ಮ ಮೇಲೆ ಆಕ್ರಮಣ ಮಾಡುವುದಕ್ಕೆ ದಾರಿ ಮಾಡಿಕೊಡುತ್ತದೆ |
| ಶಾಂತವಾಗಿದ್ದು ಯಾವುದೇ ಹಠಾತ್ ಚಾಲನೆ ಮಾಡದೇ ನಿಧಾನವಾಗಿ ಹಿಂದೆ ಸರಿಯಿರಿ | ಕೋತಿ ಮರಿಗಳನ್ನು ಮುಟ್ಟಲು ಪ್ರಯತ್ನಿಸಬೇಡಿ. ತಾಯಿ ಕೋತಿಗಳು ಮರಿಗಳನ್ನು ರಕ್ಷಣೆ ಮಾಡುವಲ್ಲಿ ಅತೀ ಜವಾಬ್ದಾರಿ ವಹಿಸುತ್ತದೆ |
| ಕೋತಿಗಳು ನಿಮ್ಮ ಹತ್ತಿರಕ್ಕೆ ಬರುತ್ತಿದ್ದರೆ, ಹಾಗೂ ನಿಮ್ಮ ಹತ್ತಿರ ಆಹಾರ ಪದಾರ್ಥಗಳಿದ್ದರೆ ದೂರ ಎಸೆದುಬಿಡಿ | ನಿಮ್ಮಲ್ಲಿ ಆಹಾರ ಪದಾರ್ಥವಿಲ್ಲದಿದ್ದರೆ ಅಂಗೈನ್ನು ಮುಚ್ಚಿಟ್ಟು ಕೊಳ್ಳಬೇಡಿ, ಅಂಗೈನ್ನು ತೆರೆದು ತೋರಿಸಿ |
| ಆಹಾರ ಪದಾರ್ಥಗಳಿರುವ ಪ್ಲಾಸ್ಟಿಕ್ ಚೀಲಗಳನ್ನು ಬಳಸಬೇಡಿ, ಪಾರದರ್ಶಕವಾಗಿರುವುದರಿಂದ ಅಥವಾ ಅದು ಆಹಾರದ ಪದಾರ್ಥಗಳನ್ನು ಹೊಂದಿರುತ್ತವೆ ಎಂದು ಆಕ್ರಮಣ ಮಾಡಬಹುದು, ಹೆಗಲ ಚೀಲ ಬಳಸುವುದು ಉತ್ತಮ | ಕೋತಿಗಳಿಗೆ ಸಹಾನುಭೂತಿಗೋ ಅಥವಾ ಧಾರ್ಮಿಕ ಕಾರಣಗಳಿಗೋ ಆಹಾರಗಳನ್ನು ನೀಡಬೇಡಿ ಅಥವಾ ಅದರ ಮುಂದೆ ತಿನ್ನಬೇಡಿ, ಇದು ಮನುಷ್ಯರನ್ನು ಆಹಾರ ಪದಾರ್ಥಗಳ ಪೂರೈಕೆದಾರರಾಗಿ ತಿಳಿದುಕೊಂಡು ಮನುಷ್ಯನ ಮೇಲಿನ ಭಯವಿಲ್ಲದೆ ಆಕ್ರಮಣ ಮಾಡುತ್ತದೆ |
| ಮನೆಗಳನ್ನು ಕೊತಿಗಳಿಂದ ಸಂರಕ್ಷಿಸಲು ಕೋತಿ ನಿರೋಧಕ ಗ್ರಿಲ್ಸ್ ಗಳು, ಎಚ್ಚರಿಕೆ ಘಂಟೆ ಮತ್ತು CCTV ಬಳಸುವುದು ಉತ್ತಮ | ಮನೆಯ ಬಾಗಿಲುಗಳು ಮತ್ತು ಕಿಟಕಿಗಳನ್ನು ತೆರದಿಡಬೇಡಿ ಕೋತಿಗಳು ಮನೆಯ ಒಳಗಡೆ ಬರುವ ಸಾಧ್ಯತೆ ಇರುತ್ತದೆ |
| ಆಹಾರ ತ್ಯಾಜ್ಯದ ತೊಟ್ಟಿಗಳನ್ನು ಮುಚ್ಚಿಡಿ ಇದು ಅವುಗಳನ್ನು ಆಕರ್ಷಿಸುವುದಲ್ಲದೆ, ಒಳ್ಳೆ ಪೌಷ್ಟಿಕಾಂಶಯುಕ್ತ ಆಹಾರ ಒದಗಿಸುತ್ತದೆ | ಕೋತಿಗಳು ಇರುವ ಸಮೀಪದಲ್ಲಿ ಆಹಾರ ತ್ಯಾಜ್ಯಗಳನ್ನು ತೆರೆದಿರುವ ಕಡೆ ಬಿಸಾಡಬೇಡಿ ಇದು ಅವನ್ನು ಆಕರ್ಷಿಸುತ್ತವೆ ಮತ್ತು ಸಂಘರ್ಷಕ್ಕೆ ಕಾರಣವಾಗುತ್ತದೆ |
| ಕೋತಿಗಳ ಹತ್ತಿರದ ಅನುಸಂಧಾನವನ್ನು ತಪ್ಪಿಸುವುದಕ್ಕೆ ಧ್ವನಿವಿಜ್ಞಾನ, ದೃಶ್ಯ, ಘ್ರಾಣ ಮತ್ತು ಸ್ಪರ್ಶ ತಂತ್ರಗಳನ್ನು ಬಳಸಿ, ಕೋತಿಗಳನ್ನು ಹಾನಿ ಮಾಡುವಂತ ತಂತ್ರವನ್ನು ಬಳಸಬೇಡಿ | ಕೋತಿಗಳ ಕಡಿತಕ್ಕೊ ಅಥವಾ ಆಕ್ರಮಣಕ್ಕೊಳಗೊಂಡ ತಕ್ಷಣ ವಿಳಂಬ ಮಾಡದೇ ವೈದ್ಯರ ಸಲಹೆಯಂತೆ ಲಸಿಕೆಗಳನ್ನು ಬಳಸಿ |

## ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

# ಕೋತಿ





**ಆವಾಸಸ್ಥಾನ: ವ್ಯಾಪಕವಾಗಿದೆ**

ಎಲ್ಲಾ ಆವಾಸಸ್ಥಾನಗಳಿಗೂ ಮತ್ತು ಮನುಷ್ಯರಿಗೂ ಹೊಂದಿಕೊಳ್ಳುತ್ತವೆ

ಮಾನವನ ವಸತಿ ಪ್ರದೇಶಗಳಲ್ಲೇ ಹೆಚ್ಚು ಗುಂಪು ಮತ್ತು ಸಾಂದ್ರತೆಯನ್ನು ಹೊಂದಿರುತ್ತದೆ

**ಆಹಾರ ಪದ್ಧತಿ: ಸರ್ವಭಕ್ಷಕ**

ಮಾನವನ ವಸತಿ ಪ್ರದೇಶದಲ್ಲೇ ಶೇಕಡಾ ೯೦% ರಷ್ಟು ಕೋತಿಗಳ ಆಹಾರಪದ್ದತಿಗಳು ಪ್ರಭಾವಕ್ಕೊಳಗಾಗಿದೆ




## ಕೋತಿ

**IUCN ಸ್ಥಿತಿ: ಕನಿಷ್ಠ ಕಾಳಜಿ**

- ಕಂದು ಮೈಬಣ್ಣ ಹೊಂದಿದ್ದು ಮುಖ ಮತ್ತು ಹಿಂದಿನ ಭಾಗ ಗುಲಾಬಿ ಬಣ್ಣವಾಗಿರುತ್ತದೆ
- ಬಾಲವು ಸಂಚರಿಸುವಾಗ ಮತ್ತು ಜಿಗಿಯುವಾಗ ದೇಹದ ಸಮತೋಲನವನ್ನು ಕಾಯ್ದುಕೊಳ್ಳುತ್ತದೆ
- ಗುಂಪಿನಲ್ಲಿ ಬದುಕುತ್ತವೆ ಮತ್ತು ಗಂಡು ಒಂದು ಗುಂಪಿನಿಂದ ಇನ್ನೊಂದಕ್ಕೆ ಚಲಿಸುತ್ತಿರುತ್ತದೆ, ಹೆಣ್ಣು ಒಂದೇ ಪಡೆಯಲ್ಲಿ ಕೊನೆಯವರೆಗೂ ಉಳಿಯುತ್ತದೆ
- ಪ್ರಾಭಲ್ಯವನ್ನು ಸ್ಥಾಪಿಸುವುದಕ್ಕೆ ಆಕ್ರಮಣಕಾರಿ ನಡವಳಿಕೆಗಳಾದ ಎಳೆಯುವುದು, ತಳ್ಳುವುದು ಮತ್ತು ಒಣ ಕಚ್ಚುವುದನ್ನು ಮಾಡುತ್ತದೆ
- ಕೋತಿಗಳು ವಿಪರೀತವಾದ  ಬುದ್ಧಿಶಾ ಲಿಗಳು,ಇವು ಮನುಷ್ಯನ ವಸತಿಗಳಲ್ಲಿ ಬದುಕುಳಿಯುವುದನ್ನು  ಕಲಿತಿವೆ
- ಇವುಗಳು ಅತ್ಯುತ್ತಮ ಆರೋಹಿಗಳು ಆದರೂ ನೆಲದ ಮೇಲೆ ಬಹುಪಾಲು ಸಮಯ ಕಳೆಯುತ್ತದೆ
- ಈಜಲು ಬರುತ್ತದೆ ಮತ್ತು ಮರಿ ಹುಟ್ಟಿದ ದಿನದಂದೇ ಈಜಲು ಸಶಕ್ತವಾಗಿರುತ್ತದೆ
- ಗುಂಪಿನ ಸದಸ್ಯರ ಜೊತೆ ಸಾಮಾಜಿಕರಿಸುವುದಕ್ಕೆ ಮತ್ತು ಪರಸ್ಪರ ಕ್ರಿಯೆಗೆ ಒಂದಕ್ಕೊಂದು ಅಂದಗೊಳಿಸುವುದು ಮತ್ತು ಆಟವಾಡುವುದನ್ನು ಮಾಡುತ್ತದೆ
- ಬಹುಪಾಲು ಹಗಲು ಸಕ್ರಿಯವಾಗಿದ್ದು ಬಹಳ ಸಮಯ ಸಾಮಾಜೀಕರಿಸುವುದಕ್ಕೆ ಮತ್ತು  ವಿಶ್ರಾಂತಿಗೆ ಬಳಸುತ್ತದೆ
- ಕಾಡಿನಲ್ಲಿರುವ ಪಡೆಗಳು ಬಹುಪಾಲು ಸಮಯ ಆಹಾರವನ್ನು ಹುಡುಕುತ್ತಾ ಕಳೆಯುತ್ತದೆ, ಇವುಗಳ ಜನನ ಪ್ರಮಾಣ ಆಹಾರದ ಲಭ್ಯತೆಯ ಮೇಲೆ ಅವಲಂಬಿತವಾಗಿರುತ್ತದೆ
- ಹೆಚ್ಚಿನ ಪೋಷಕಾಂಶವುಳ್ಳ ಮನುಷ್ಯನ ಆಹಾರ ತ್ಯಾಜ್ಯ ವಸ್ತುಗಳ ಕಸವು ಆಕರ್ಷಿಸುವುದಲ್ಲದೆ ಅವುಗಳ ಸಂಖ್ಯೆಯು ಹೆಚ್ಚಾಗುವುದಕ್ಕೆ ಕಾರಣವಾಗುತ್ತದೆ

**ಪಡೆಗಳ ಗಾತ್ರ**

ಪಡೆಗಳ ಗಾತ್ರವು 10 ರಿಂದ ೮೦ ರವರೆಗೂ ಇರುತ್ತದೆ

ಆಹಾರವು ಹೇರಳವಾಗಿ ಇರುವ ಕಡೆ ಪಡೆಗಳ ಗಾತ್ರವು >200 ವರೆಗೂ ಇರುತ್ತದೆ


**ಸಂತಾನಾಭಿವೃದ್ಧಿಯ ವಯಸ್ಸು**

2.5 – 4 ವರ್ಷ | ಅವಧಿ : 5.5 ತಿಂಗಳು


| ಹೆಣ್ಣು ಪ್ರತಿ ವರ್ಷಕ್ಕೆ

ಒಮ್ಮೆಗೆ ಒಂದು ಮರಿ ಮತ್ತು ಅಪರೂಪಕ್ಕೆ ಅವಳಿ ಮರಿಗಳಿಗೆ ಜನ್ಮ ನೀಡುತ್ತದೆ

**ಗಾತ್ರ**




**ಸರಾಸರಿ ಜೀವಿತಾವಧಿ**




## ನಿಮಗಿದು ಗೊತ್ತೇ?

- ಭಾರತದಲ್ಲಿ ಮನುಷ್ಯನ ನಂತರ ಅತೀ ಹೆಚ್ಚು ವ್ಯಾಪಕವಾಗಿ ಹರಡಿಕೊಂಡಿರುವ ಸಸ್ತನಿ
- ಇವು ಪರಿಸರದ ವ್ಯವಸ್ಥೆಯಲ್ಲಿ ಹಣ್ಣಿನ ಮರದ ಬೀಜಗಳ ಪ್ರಸರಣ ಮಾಡುತ್ತವೆ
- ಗಂಡು ಹೆಣ್ಣು ಎರಡರಲ್ಲೂ ಬಲವಾದ ರೇಖೀಯ ಪ್ರಾಬಲ್ಯದ ಕ್ರಮಾನುಗತವನ್ನು ಕಾಣಬಹುದು
- ಕೋತಿಗಳ ಗುಂಪುಗಳನ್ನು ನಿರಂತರವಾಗಿ ಸ್ಥಳಾಂತರಿಸುವದರಿಂದ ಮತ್ತು ಗುಂಪುಗಳನ್ನು ವಿಭಜಿಸುವುದರಿಂದ ಅವುಗಳು ಇನ್ನೂ ಹೆಚ್ಚಿನ ಒತ್ತಡಕ್ಕೆ ಒಳಗಾಗುತ್ತದೆ
- ಮಾನವ ಕೋತಿ ಸಂಘರ್ಷಗಳು ಬೆಳೆ ಹಾನಿಯಿಂದ ಹಿಡಿದು ಮನೆಗಳಿಗೆ ನುಗ್ಗಿ ಆಹಾರವನ್ನು ಕದ್ದು ತಿಂದು, ಮನುಷ್ಯರಿಗೆ ಗಾಯಗೊಳಿಸುವ ತನಕ ನಡೆಯುತ್ತದೆ
- ಧಾರ್ಮಿಕ ಮತ್ತು ಸಹಾನುಭೂತಿಯ ಕಾರಣಗಳಿಂದ ಜನರು ಮಂಗಗಳಿಗೆ ಆಹಾರವನ್ನು ನೀಡುತ್ತಾರೆ ಇದು ಮಂಗಗಳ ಅವಲಂಬನೆಗೆ ಕಾರಣವಾಗುತ್ತದೆ ಮತ್ತು ಅವು ಆಹಾರವನ್ನು ಕಸಿದುಕೊಳ್ಳಲು ಅಥವಾ ಮನುಷ್ಯರ ಮೇಲೆ ದಾಳಿ ಮಾಡಲು ಪ್ರಾರಂಭಿಸುತ್ತವೆ

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

# ಹಾವುಗಳು

ಹಾವು ಕಡಿತಕ್ಕೆ ಒಳಗಾದರೆ ಶಾಂತವಾಗಿರಿ ಮತ್ತು ಕಚ್ಚಿದ ದೇಹದ ಭಾಗವನ್ನು ನಿಷ್ಕ್ರಿಯಗೊಳಿಸಿ ಆದಷ್ಟು ಬೇಗ ಹಾವಿನ ಕಡಿತಕ್ಕೆ ಉಪಯೋಗಿಸುವ ಔಷಧಿಯಿರುವ ಆಸ್ಪತ್ರೆಗಳಿಗೆ ದಾಖಲಾಗಿ

### ಆವಾಸಸ್ಥಾನ

ತೆರೆದ, ಹುಲ್ಲು ಮತ್ತು ಪೊದೆ ಪ್ರದೇಶ, ಕೃಷಿಭೂಮಿ, ಮರದ ಪೊಳ್ಳು, ಕಾಡು ಮತ್ತು ನಗರಗಳನ್ನು ಒಳಗೊಂಡಂತೆ ಮಾನವ ವಸತಿ ಪ್ರದೇಶ

### ಜಾತಿಯ ಶ್ರೀಮಂತಿಕೆ

ಭಾರತದಲ್ಲಿ ಸುಮಾರು 300 ಜಾತಿಯ ಹಾವುಗಳು ಕಂಡುಬರುತ್ತವೆ. ಭಾರತದಲ್ಲಿ ಹಾವುಗಳನ್ನು ಕಾನೂನುಬದ್ಧವಾಗಿ ರಕ್ಷಿಸಲಾಗಿದೆ

### ದೊಡ್ಡ 4

ಹೆಚ್ಚಿನ ಹಾವುಗಳು ನಿರುಪದ್ರವಿ. ಕೇವಲ ನಾಲ್ಕು ಪ್ರಭೇದದ ಹಾವುಗಳು ಹೆಚ್ಚಿನ ಮರಣಕ್ಕೆ ಕಾರಣವಾಗಿವೆ

## ನಾಗರ ಹಾವು

ನಾಜ ನಾಜಾ
ನರ ವಿಷಕಾರಿ



ದೇಹದ ಬಣ್ಣವು ಗಾಢ ಕಂದು ಬಣ್ಣದಿಂದ ಕಪ್ಪು ಬಣ್ಣಕ್ಕೆ ಬದಲಾಗುವ ದೊಡ್ಡ ಗಾತ್ರದ ಹಾವು. ಎಚ್ಚರಿಕೆ ನೀಡುವಾಗ, ಹಾವು ತನ್ನ ತಲೆಯನ್ನು ಮೇಲಕ್ಕೆತ್ತಿ ರಕ್ಷಣೆಗಾಗಿ ತನ್ನ ಹೆಡೆಯನ್ನು ಹರಡುತ್ತದೆ. ದೇಹದ ಕೆಳಗಿನ ಭಾಗದ ಹುರುಪುಗಳು ನಯವಾದ ಮತ್ತು ಅಂಡಾಕಾರದ ಆಕಾರದಲ್ಲಿರುತ್ತವೆ. ಹುಡ್ ಗುರುತುಗಳು ಪ್ರತ್ಯೇಕವಾಗಿ ಸ್ಪಷ್ಟವಾದ ಕನ್ನಡಕ ಚಿಹ್ನೆಯಿಂದ ಹುಡ್ ಗುರುತುಗಳಿಲ್ಲದವರೆಗೆ ಬದಲಾಗುತ್ತವೆ

- ಸಂಜೆಯಲ್ಲಿ ಅತೀ ಹೆಚ್ಚು ಸಕ್ರಿಯವಾಗಿರುತ್ತದೆ
- ಸಾಮಾನ್ಯವಾಗಿ ಕೃಷಿ ಭೂಮಿಗಳಲ್ಲಿ ಮತ್ತು ಬಲಿ ಪ್ರಾಣಿಗಳಿಗಾಗಿ ಅಥವಾ ಆಶ್ರಯಕ್ಕಾಗಿ ಮನೆಗೆ ಬರುತ್ತದೆ
- ನಾಗರ ಹಾವು ಬುಸುಗುಡುವುದು ಮತ್ತು ಹೆಡೆಯನ್ನು ಬಿಚ್ಚುವುದು ರಕ್ಷಣಾತ್ಮಕ ಮತ್ತು ಎಚ್ಚರಿಕೆ ಸೂಚನೆಗಳು
- ಕಡಿತಕ್ಕೆ ಒಳಗಾದರೆ ಹೆಚ್ಚು ನೋವಿನಿಂದ ಮತ್ತು ಊತದಿಂದ ಮತ್ತು ಕಚ್ಚಿದ ಭಾಗದಿಂದ ರಕ್ತ ಸುರಿಯುವುದು, ಹಾಗೂ ಉಸಿರಾಟಕ್ಕೆ ತೊಂದರೆ, ಮಂದ ದೃಷ್ಟಿಯಾಗುವುದು
- ವಿಷವು ಪಾರ್ಶ್ವವಾಯು, ಉಸಿರಾಟ ಮತ್ತು ಹೃದಯ ವೈಫಲ್ಯಕ್ಕೆ ಕಾರಣವಾಗಬಹುದು

ಹೆಚ್ಚಿನ ಹಾವು ಕಡಿತಗಳು ಮಳೆಗಾಲದ ಸಮಯದಲ್ಲಿ ಸಂಭವಿಸುತ್ತವೆ, ಹಾವುಗಳು ಪ್ರವಾಹದ ಸಮಯದಲ್ಲಿ ತಮ್ಮ ಬಿಲಗಳಿಂದ ಹೆಚ್ಚಾಗಿ ಮನೆಗಳು ಮತ್ತು ಕೃಷಿ ಕ್ಷೇತ್ರಗಳಿಗೆ ಹೆಚ್ಚಾಗಿ ಬರುತ್ತವೆ

## ಕಟ್ಟಾವು

ಬುಂಗರುಸ್ ಸೇರುಲಿಯಸ್
ನರ ವಿಷಕಾರಿ

ತೆಳ್ಳಗಿನ ಕಪ್ಪು ಅಥವಾ ನೀಲಿ ಕಪ್ಪು ದೇಹವನ್ನು ಹೊಂದಿರುವ ಮಧ್ಯಮ ಗಾತ್ರದ ಹಾವು ದೇಹದ ಮೇಲೆ ಕ್ಷೀರ-ಬಿಳಿ ಪಟ್ಟಿಗಳು (ಸಾಮಾನ್ಯವಾಗಿ ಜೋಡಿಯಾಗಿ) ಕಾಣುತ್ತದೆ. ದೇಹದ ಮುಂಭಾಗದಲ್ಲಿ ಬ್ಯಾಂಡ್‌ಗಳು ಇಲ್ಲದಿರಬಹುದು. ಕಶೇರುಖಂಡಗಳ ಪ್ರದೇಶದಲ್ಲಿ ಷಡ್ಭುಜಾಕೃತಿಯ ಹುರುಪುಗಳು ಮತ್ತು ಅದು ನಯವಾಗಿರುತ್ತವೆ.



- ರಾತ್ರಿಯಲ್ಲಿ ಸಕ್ರಿಯವಾಗಿರುತ್ತದೆ
- ಕಲ್ಲು ಬಂಡೆಗಳಿರುವ ಕಡೆ ಮತ್ತು ಎಲೆಗಳ ರಾಶಿ, ಹುತ್ತದಲ್ಲಿ, ಇಲಿಗಳ ಬಿಲದಲ್ಲಿ, ಮತ್ತು ಕೆಲವೆಡೆ ಗೋಡೆಗಳ ಸಂದುಗಳಲ್ಲಿ ಇರುತ್ತವೆ
- ಬೆಳಗಿನ ಸಮಯದಲ್ಲಿ ಹಾವಿಗೆ ತೊಂದರೆ ಮಾಡಿದರೆ ತನ್ನ ತಲೆಯನ್ನು ದೇಹದ ಒಳಗಡೆ ಸೇರಿಸಿಕೊಂಡು ಸುತ್ತಿಕೊಂಡು ಬಿಡುತ್ತದೆ, ಅತೀ ಹೆಚ್ಚು ಅದನ್ನು ಪ್ರಚೋದಿಸಿದರೆ ಕಚ್ಚುತ್ತದೆ, ಆದರೆ ರಾತ್ರಿಯಲ್ಲಿ ಯಾವುದೇ ಎಚ್ಚರಿಕೆ ನೀಡದೆ ಕಚ್ಚುತ್ತದೆ
- ನೆಲದ ಮೇಲೆ ಮಲಗಿರುವವರಿಗೆ ಕಚ್ಚುತ್ತದೆ. ಕಚ್ಚುವಿಕೆಯು ನೋವು ರಹಿತವಾಗಿರುತ್ತದೆ. ಕಡಿತಕ್ಕೆ ಒಳಗಾದ ವ್ಯಕ್ತಿ ನಿದ್ರೆಯಲ್ಲೇ ಸಾಯಬಹುದು. ಯಾಕೆಂದರೆ ಅದು ಶಕ್ತಿಯುತ ನರ ವಿಷಕಾರಿಯಾಗಿರುವುದರಿಂದ
- ಹೊಟ್ಟೆ ಸೆಳೆತ, ಮಂದ ದೃಷ್ಟಿ, ಬೆವರುವುದು, ವಾಂತಿ, ಮಾತಿನಲ್ಲಿ ತೊಂದರೆ ಸಾಮಾನ್ಯ ರೋಗಲಕ್ಷಣವು

## ಕೊಳಕು ಮಂಡಲ

ಡಬಾಯ್ಯಾ ರಸೆಲ್ಲಿ
ಹೆಮೋಟಾಕ್ಸಿಕ್ ವಿಷ

ತ್ರಿಕೋನ ತಲೆಯೊಂದಿಗೆ ಒರಟು ಹುರುಪುಗಳಿಂದ ಕೂಡಿದ್ದು ತಲೆಯ ಮೇಲೆ ಒಂದು ಬಾಣ ಅಥವಾ ಶಿಲುಬೆಯಂತಹ ಗುರುತು ಹೊಂದಿರುತ್ತದೆ. ಹಿಂಭಾಗದಲ್ಲಿ, ಹಳದಿ, ಕಂದು ಅಥವಾ ನೆಲದ ಬಣ್ಣವನ್ನು ಹೊಂದಿರುತ್ತದೆ. ಮತ್ತು ದೇಹದ ಉದ್ದಕ್ಕೂ ಮೂರು ಕಂದು ಬಣ್ಣದ ಚುಕ್ಕೆಗಳಿದ್ದೂ ಅದರ ಸುತ್ತಲೂ ಕಪ್ಪುಬಣ್ಣದ ಗೆರೆಯು ಸುತ್ತುವರೆದಿದ್ದು ಅದರ ಹೊರಗಿನ ಭಾಗ ಬಿಳಿ ಅಥವಾ ಹಳದಿ ಭಾಗದಿಂದ ಕೂಡಿರುತ್ತದೆ

ಮೊಟ್ಟೆಯೊಡೆಯುವ ಮರಿಗಳು ಸಂಪೂರ್ಣವಾಗಿ ಕ್ರಿಯಾತ್ಮಕ ವಿಷ ಗ್ರಂಥಿಗಳು ಹೊಂದಿವೆ



- ರಾತ್ರಿ ಸಕ್ರಿಯವಾಗಿರುತ್ತದೆ, ಹವಾಮಾನ ತಂಪಾಗಿದ್ದರೆ ಬೆಳಗ್ಗೆ ಕೂಡ ಸಕ್ರಿಯವಾಗಿರುತ್ತದೆ
- ಹುಲ್ಲಿನ ಮತ್ತು ಕಾಡಿನ ಪ್ರದೇಶ  ಹಾಗೂ ಕೃಷಿ ಭೂಮಿಯಲ್ಲಿ ಕಂಡುಬರುತ್ತವೆ
- ನಿಧಾನವಾಗಿ ಅಥವಾ ಜಡತ್ವವಾಗಿ ಕಾಣಸಿಗುತ್ತವೆ. ಎಚ್ಚರಿಕೆನೀಡುವುದಕ್ಕೆ ಕುಕ್ಕರ್ ನ ಶಿಳ್ಳೆ ಯಂತೆ ಶಬ್ದ ಮಾಡುತ್ತದೆ
- ಮಿಂಚಿನ ವೇಗದಲ್ಲಿ ಆಕ್ರಮಣಕಾರಿಯಾಗಿ ಕಚ್ಚುತ್ತದೆ
- ಕಡಿತ ತುಂಬಾ ನೋವನ್ನು ಕೊಡುತ್ತದೆ ಮತ್ತು ಗುಳ್ಳೆಗಳಾಗುತ್ತವೆ ಹ್ಹೀಮೊ ಟಾಕ್ಸಿಕ್ ವಿಷದಿಂದ ಒಸಡುಗಳಲ್ಲಿ ಮತ್ತು ಕಣ್ಣು ಗಳಲ್ಲಿ ರಕ್ತ ಬರುವುದುಂಟು

## ಗರಗಸ ಮಂಡಲ

ಯೇಕೀಸ್ ಕ್ಯಾರಿನಾಟಸ್
ಹೆಮೋಟಾಕ್ಸಿಕ್ ವಿಷ

ತ್ರಿಕೋನಾಕಾರದ ತಲೆಯೊಂದಿಗೆ ಒರಟು ಹುರುಪುಗಳಿಂದ ಕೂಡಿದ್ದು ದೇಹದ ಬಣ್ಣಗಳು ಇಟ್ಟಿಗೆ ಕೆಂಪು ಬಣ್ಣದಿಂದ ಧೂಳಿನ ಕಂದು ಬಣ್ಣದ ವರೆಗೂ ಕಂಡುಬರುತ್ತದೆ ಹಾಗೂ ತಲೆಯ ಮೇಲೆ ಒಂದು ಬಾಣ ಅಥವಾ ಶಿಲುಬೆಯಂತಹ ಗುರುತನ್ನು ಹೊಂದಿರುತ್ತದೆ

- ರಾತ್ರಿಯಲ್ಲಿ ಸಕ್ರಿಯವಾಗಿದ್ದು, ಸಂಧ್ಯಾಕಾಲದಲ್ಲಿ ಬೇಟೆ ಮಾಡುತ್ತದೆ
- ಮರುಭೂಮಿ, ಅರೆ ಮರುಭೂಮಿ, ಪತನಶೀಲ ಕಾಡು, ಹುಲ್ಲುಗಾವಲು, ಕುರುಚಲು ಕಾಡು, ಕಲ್ಲುಗಳ ಸಂದಿಯಲ್ಲಿ ಬದುಕುತ್ತವೆ
- ಅಡ್ಡ ಅಂಕುಡೊಂಕಾದ ಚಲನವಲನದಿಂದ ಕೂಡಿರುತ್ತದೆ. ದೇಹವನ್ನು "S" ಆಕಾರದಲ್ಲಿಟ್ಟು ಕೊಂಡು ಸಂಚರಿಸುತ್ತದೆ
- ಎಚ್ಚರಿಕೆ ಕೊಡುವಾಗ ಗರಗಸದ ಶಬ್ದ ವನ್ನು ಹೊರ ಹೊಮ್ಮಿಸುತ್ತದೆ. ಇದು ತನ್ನ ದೇಹವನ್ನು ನಿರಂತರವಾಗಿ ಉಜ್ಜುವುದರಿಂದ ನಡೆಯುತ್ತದೆ
- ಹಾವಿಗೆ ತೊಂದರೆ ನೀಡಿದರೆ ಯಾವುದೇ ಎಚ್ಚರಿಕೆ ನೀಡದೆ ಆಕ್ರಮಣಕಾರಿಯಾಗಿ ಮತ್ತು ಪದೆ ಪದೇ ಕಚ್ಚುತ್ತದೆ
- ಕಚ್ಚಿದ ಸ್ಥಳದಲ್ಲಿ ಊತ, ನೋವು, ರಕ್ತ ಸೋರುವುದು ಗುಳ್ಳೆಗಳಾಗುವುದು ಸಾಮಾನ್ಯ ಮತ್ತು ಒಸಡು ಹಾಗೂ ಕಣ್ಣುಗಳಲ್ಲಿ ರಕ್ತ ಬರುತ್ತದೆ



ವಿಷಪೂರಿತ ಹಾವು ಕಡಿತದ ಸಂದರ್ಭದಲ್ಲಿ, ವೈದ್ಯಕೀಯ ಆರೈಕೆಯಲ್ಲಿ ಆಂಟಿವೆನಮ್ ಅನ್ನು ಸಮಯೋಚಿತವಾಗಿ ನೀಡುವುದು ಮಾತ್ರ ಚಿಕಿತ್ಸೆಯಾಗಿದೆ

## ನಿಮಗಿದು ಗೊತ್ತೇ?

- ಇಲಿಗಳನ್ನು ನಿಯಂತ್ರಿಸುವ ಮೂಲಕ ಹಾವುಗಳು ಪ್ರಮುಖ ಪರಿಸರ ವ್ಯವಸ್ಥೆಯ ಸೇವೆಗಳನ್ನು ಒದಗಿಸುತ್ತವೆ. ರೋಗಗಳನ್ನು ಉಂಟುಮಾಡುವ ಮತ್ತು ಬೆಳೆ ಹಾನಿ ಮಾಡುವ ಕೀಟಗಳನ್ನು ನಿಯಂತ್ರಿಸುತ್ತವೆ
- ಹಾವುಗಳು ಮನುಷ್ಯರೊಡನೆ ಮುಖಾಮುಖಿಯಾಗುವುದನ್ನು ತಪ್ಪಿಸುತ್ತವೆ ಮತ್ತು ಬೆದರಿಕೆಯೊಡ್ಡಿದಾಗ ಮಾತ್ರ ದಾಳಿ ಮಾಡುತ್ತವೆ ಆಕಸ್ಮಿಕವಾಗಿ ತುಳಿದಾಗ ಮಾತ್ರ ದಾಳಿ ಮಾಡುತ್ತವೆ
- ಸಾಮಾನ್ಯವಾಗಿ ಕೆಲವು ವಿಷಪೂರಿತ ಹಾವು ತನ್ನ ಬಲಿಪಶುವಿಗೆ ವಿಷವನ್ನು ಚುಚ್ಚುಮದ್ದು ಮಾಡದೆ ಕಚ್ಚುತ್ತದೆ, ಇದನ್ನು 'ಒಣ ಕಚ್ಚುವಿಕೆ' ಎಂದು ಕರೆಯಲಾಗುತ್ತದೆ
- ಹಾವು ಜನರನ್ನು ಗುರುತು ಹಿಡಿದು ದ್ವೇಷಕ್ಕಾಗಿ ಹಿಂಬಾಲಿಸಿ ಕಚ್ಚುತ್ತದೆ ಎಂಬುದು ಜನಪ್ರಿಯ ನಂಬಿಕೆ. ಆದರೆ ಹಾವುಗಳಿಗೆ ನೆನಪಿನ ಶಕ್ತಿ ಇರುವುದಿಲ್ಲ ಮತ್ತು ಹಾವುಗಳು ಮನುಷ್ಯರಿಂದ ದೂರವಿರಲು ಬಯಸುತ್ತದೆ
- ಪ್ರತಿ ವರ್ಷ ಭಾರತದಲ್ಲಿ ಹಾವಿನ ಕಡಿತದಿಂದ ಸುಮಾರು 50,000 ಜನರು ಪ್ರಾಣ ಕಳೆದು ಕೊಳ್ಳುತ್ತಿದ್ದಾರೆ

- ಹಾವುಗಳು ಬೇಟೆ ಪ್ರಾಣಿಯನ್ನು ನಿಶ್ಚಲಗೊಳಿಸಲು ಮತ್ತು ಜೀರ್ಣಕ್ರಿಯೆಗಾಗಿ ವಿಷವನ್ನು ಚುಚ್ಚುತ್ತವೆ. ಮತ್ತು ದೊಡ್ಡ ನಾಲ್ಕು ವಿಷಪೂರಿತ ಹಾವುಗಳು ಆಹಾರಕ್ಕಾಗಿ ಸಣ್ಣ ಸಸ್ತನಿ, ಪಕ್ಷಿ, ಸರೀಸೃಪ ಮತ್ತು ಉಭಯಚರಗಳನ್ನು ತಿನ್ನುತ್ತವೆ
- ಹಾವುಗಳು ಬೇಟೆಯನ್ನು ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಗ್ರಹಿಸಲು ತಮ್ಮ ಕವಲೊಡೆದ ನಾಲಿಗೆಯನ್ನು ಬಳಸುತ್ತವೆ; ವಿಶೇಷವಾಗಿ ಅದರ ಬೇಟೆಯನ್ನು ಪತ್ತೆಹಚ್ಚಲು
- ಅರಿವಿನ ಕೊರತೆ ಮತ್ತು ಭಯದ ಪರಿಣಾಮವಾಗಿ ವಿಷರಹಿತ ಹಾವುಗಳು ಸೇರಿದಂತೆ ಎಲ್ಲಾ ಹಾವುಗಳನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲಲಾಗುತ್ತಿದೆ
- ಕಾಡುಗಳ ನಾಶ, ರಸ್ತೆಯ ಅಪಘಾತಗಳಿಂದ, ಚರ್ಮ ಮತ್ತು ಮಾಂಸಕ್ಕಾಗಿ ಬೇಟೆಯಾಡುವುದರಿಂದ ಹಾವುಗಳ ಸಂತತಿ ಕಮ್ಮಿ ಆಗುತ್ತಿದೆ
- ಭಯದಿಂದ ಹಾವುಗಳನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲುವುದು ಸಹ ಒಂದು ದೊಡ್ಡ ಕಾರಣವಾಗಿದೆ

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

german cooperation DEUTSCHE ZUSAMMENARBEIT
Implemented by giz Deutsche Gesellschaft für Internationale Zusammenarbeit (GIZ) GmbH



# ಹಾವುಗಳನ್ನು ಕಂಡರೆ ಏನು ಮಾಡಬೇಕು ಮತ್ತು ಏನು ಮಾಡಬಾರದು

## ಮಾಡಬೇಕು ✓

- ಭಾರತದಲ್ಲಿ ಕಂಡುಬರುವ ಅತಿ ಹೆಚ್ಚು ಹಾವಿನ ಪ್ರಬೇಧಗಳು ವಿಷರಹಿತವಾಗಿದೆ ನಾಲ್ಕು ಪ್ರಬೇಧಗಳು ಮಾತ್ರ ವಿಷವನ್ನು ಹೊಂದಿದೆ ನಾಗರಹಾವು, ಕಟ್ಟಾವು, ಕೊಳಕಮಂಡಲ, ಗರಗಸ ಮಂಡಲ
- ಸಸ್ಯವರ್ಗದ ಹೊದಿಕೆ ಹೆಚ್ಚಿರುವ ಕಡೆ ದೊಣ್ಣೆಯನ್ನು ನೆಲಕ್ಕೆ ಬಡಿಯುತ್ತಾ ಚಲಿಸುವುದರಿಂದ ಇವು ಹಾವುಗಳನ್ನು ಎಚ್ಚರಿಸುತ್ತವೆ
- ದಿಮ್ಮಿಗಳಮೇಲೆ ನಡೆಯುವಾಗ ಅಥವಾ ಕೂರುವಾಗ ಪರಿಶೀಲಿಸಿ. ಕತ್ತಲೆಯಲ್ಲಿ ಟಾರ್ಚ್ ಬಳಸುವುದು ಉತ್ತಮ
- ಕತ್ತಲೆಯಲ್ಲಿ ಪ್ರತ್ಯೇಕವಾಗಿ ಮಣ್ಣಿನ ರಸ್ತೆ ಬಳಸುವಾಗ, ರೈತರು ಬೆಳೆಕೊಯ್ಲು ಮಾಡುವಾಗ ಎಚ್ಚರದಿಂದಿರಿ
- ಹಾವುಗಳಿಂದ ಸುರಕ್ಷಿತ ಅಂತರ ಕಾಯ್ದುಕೊಳ್ಳಿ. ಮತ್ತು ಅದರ ಚಲನ ವಲನ ಮೇಲೆ ದೃಷ್ಟಿ ಇಡಿ. ಸಾಮಾನ್ಯವಾಗಿ ತಾವಾಗಿ ಹೊರಟು ಹೋಗುತ್ತದೆ ಇಲ್ಲವಾದರೆ ರಕ್ಷಣಾ ತಂಡಕ್ಕೆ ವಿಷಯ ತಿಳಿಸಿ
- ಒಂದು ವೇಳೆ ಹಾವು ಕಡಿತಕ್ಕೆ ಒಳಗಾದರೆ ಶಾಂತವಾಗಿರಿ ಮತ್ತು ಆದಷ್ಟು ಬೇಗ ಹಾವಿನ ಕಡಿತಕ್ಕೆ ಉಪಯೋಗಿಸುವ ಔಷಧಿಯಿರುವ ಆಸ್ಪತ್ರೆಗಳಿಗೆ ದಾಖಲಾಗಿ ಮತ್ತು ಸಾಧ್ಯವಾದರೆ ಹಾವಿನ ಬಣ್ಣ ಚಹರೆಗಳನ್ನು ನೆನಪಿಡಿ
- ಹಾವಿನ ಕಡಿತಕ್ಕೆ ಒಳಗಾದ ದೇಹದ ಭಾಗವನ್ನು ಸಡಿಲವಾದ ಬ್ಯಾಂಡೇಜನ್ನು ಕಟ್ಟಿ ಮತ್ತು ಹೃದಯ ಭಾಗದ ಕೆಳಗೆ ಇರುವ ಹಾಗೆ ನೋಡಿಕೊಳ್ಳಿ
- ಕಡಿತಕ್ಕೊಳಗಾದವರನ್ನು ಎಡಕ್ಕೆ ತಿರುಗಿಸಿ ಬಲಗಾಲನ್ನು ಮಡಚಿ ಮಲಗಿದ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಿಸಿ ಇದು ಉಸಿರುಗಟ್ಟಿಸುವುದನ್ನು ತಪ್ಪಿಸುತ್ತದೆ
- ಹಾವಿನ ರಕ್ಷಣೆ ಮಾಡುವವರ ಮೊಬೈಲ್ ಸಂಖ್ಯೆ ಅಥವಾ ಹತ್ತಿರದ ಅರಣ್ಯ ಇಲಾಖೆಗೆ ವಿಷಯ ಮುಟ್ಟಿಸಿ
- ಮನೆಯಲ್ಲಿರುವ ಬಿರುಕುಗಳು ಮತ್ತು ಸಂಧಿಗಳನ್ನು ಮುಚ್ಚಿ ಹಾಗೂ ಕಿಟಕಿಗಳನ್ನು ಜಾಲರಿಗಳಿಂದ ಭದ್ರ ಮಾಡಿ ಇದು ಇಲಿಗಳಿಂದ ಹಾಗೂ ಹಾವುಗಳು ಬರುವುದನ್ನು ತಪ್ಪಿಸುತ್ತದೆ
- ಚರಂಡಿಗಳ ಪೈಪ್ ಗಳನ್ನು ಜಾಲರಿಗಳಿಂದ ಮುಚ್ಚಿ ಇದು ಹಾವುಗಳುಒಳಗೆ ಪ್ರವೇಶಿಸದ ಹಾಗೆ ನೋಡಿಕೊಳ್ಳುತ್ತದೆ ಮತ್ತು ಮನೆಯ ನೀರು ಈಚೆ ಹೋಗುತ್ತದೆ
- ಶೌಚಾಲಯವನ್ನು ಬಳಸುವ ಮುನ್ನ ಪರಿಶೀಲಿಸಿ ಬಳಸಿ

## ಮಾಡಬಾರದು ✗

- ಹಾವುಗಳನ್ನು ಕಂಡ ಕೂಡಲೇ ಹೆದರಬೇಡಿ, ಮತ್ತು ಹಾವನ್ನು ಕೊಲ್ಲಬೇಡಿ, ಅತೀ ಹೆಚ್ಚಿನ ಹಾವುಗಳು ವಿಷಕಾರಿ ಆಗಿರುವುದಿಲ್ಲ. ಹಾಗೂ ಹಾವುಗಳು ಇಲಿಗಳ ಸಂತತಿಯನ್ನು ನಿಯಂತ್ರಣದಲ್ಲಿರಿಸುತ್ತವೆ
- ಹಾವಿನ ಕಡಿತದಿಂದ ತಪ್ಪಿಸಿಕೊಳ್ಳಲು ಕೃಷಿ ಭೂಮಿಯಲ್ಲಿ ಅಥವಾ ಕಾಫೀ ತೋಟಗಳಲ್ಲಿ ಬರಿಕಾಲಿನಿಂದ ಕೆಲಸ ಮಾಡದೇ ಶೂಗಳನ್ನು ಬಳಸಿ
- ನೆಲದ ಮೇಲೆ ಮಲಗುವುದನ್ನು ತಪ್ಪಿಸಿ, ಮಲಗಿದಾಗ ಸೊಳ್ಳೆಪರದವನ್ನು ಬಳಸುವುದು ಉತ್ತಮ
- ಮನೆಯಲ್ಲಿ ಆಹಾರ ಧಾನ್ಯಗಳನ್ನು ತೆರೆದಿಡಬೇಡಿ, ಇದು ಇಲಿಗಳನ್ನು ಆಕರ್ಷಿಸುತ್ತವೆ ಮತ್ತು ಅದು ಹಾವುಗಳನ್ನು ಆಕರ್ಷಿಸುತ್ತವೆ
- ಹಾವುಗಳಿಂದ ದೃಷ್ಟಿ ತೆಗಿಯಬೇಡಿ, ಮತ್ತು ಹಾವುಗಳ ಸುತ್ತ ನಿಲ್ಲಬೇಡಿ
- ಹಾವು ಕಡಿತಕ್ಕೆ ಒಳಗಾದವರನ್ನು ಓಡಾಡಲು ಬಿಡಬೇಡಿ ಮತ್ತು ಕಚ್ಚಿದ ಭಾಗವನ್ನು ಕತ್ತರಿಸುವದಾಗಲಿ, ಬಾಯಲ್ಲಿ ವಿಷವನ್ನು ಹೀರುವುದಾಗಲಿ, ಗಟ್ಟಿಯಾಗಿ ಕಟ್ಟುವುದಾಗಲಿ ಮಾಡಬೇಡಿ
- ಹಾವು ಕಚ್ಚಿದಾಗ ಯಾವುದೇ ಕಾರಣಕ್ಕೂ ಚಿಕಿತ್ಸೆಗಾಗಿ ಮಾಂತ್ರಿಕರ ಹತ್ತಿರ ಹೋಗಬೇಡಿ ಅದು ನಿಮ್ಮ ಪ್ರಾಣವನ್ನೇ ಬಲಿ ತೆಗೆದುಕೊಳ್ಳಬಹುದು
- ಹಾವು ಕಚ್ಚಿದ ವ್ಯಕ್ತಿಯ ಮೈ ಮೇಲೆ ಯಾವುದೇ ಬಿಗಿಯಾದ ವಸ್ತುಗಳನ್ನಿರಿಸಬೇಡಿ, ಕಚ್ಚಿದ ಮನುಷ್ಯನ ಭಾಗ ಹಿಗ್ಗುವುದರಿಂದ ಚರ್ಮದ ಮೇಲೆ ಗಾಯಗಳಾಗಬಹುದು
- ಹಾವುಗಳನ್ನು ಸ್ವತಃ ನೀವೇ ಹಿಡಿಯಲು ಪ್ರಯತ್ನಿಸಬೇಡಿ. ಬಹುಪಾಲು ಜನರು ಇದರಿಂದಲೇ ಕಡಿತಕ್ಕೊಳಗಾಗಿದ್ದರೆ
- ಹಾವುಗಳನ್ನು ಹಿಡಿಯುವುದನ್ನು ನುರಿತ ವೃತ್ತಿಪರ ಹಾವಿನ ಸಂರಕ್ಷಕರಿಗೆ ಬಿಡಿ
- ಹಾವಿನ ರಕ್ಷಣಾ ಕಾರ್ಯಾಚರಣೆ ನಡೆಯುವಾಗ ಸರಕ್ಷಕರಿಗೆ ಸ್ಥಳ ನೀಡಿ, ಫೋಟೋ ಅಥವಾ ವಿಡಿಯೋ ಮಾಡಲು ಗುಂಪು ಸೇರಬೇಡಿ
- ಚರಂಡಿಗಳ ಪೈಪ್ಗಳನ್ನು ಮುಚ್ಚದೆ ಬಿಡಬೇಡಿ, ಮಳೆಗಾಲದಲ್ಲಿ ಹಾವುಗಳು ಒಳಗಡೆ ಬರುವ ಸಾಧ್ಯತೆ ಇರುತ್ತದೆ

## ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು



# ಕರಡಿಗಳನ್ನು ಕಂಡ ತಕ್ಷಣ ಏನು ಮಾಡಬೇಕು ಮತ್ತು ಏನು ಮಾಡಬಾರದು

| ಮಾಡಬೇಕು ✓ | ಮಾಡಬಾರದು ✕ |
| --- | --- |
| ಕಾಡಿನಲ್ಲಿ ಒಂಟಿಯಾಗಿ ಚಲಿಸಬೇಕಾಗಿ ಬಂದಾಗ ದೊಣ್ಣೆ ಹಿಡಿದು ಶಬ್ದ ಮಾಡುತ್ತಾ ಸಂಚರಿಸುವುದು ಉತ್ತಮ, ಇದು ನಮ್ಮ ಬರುವಿಕೆಯನ್ನು ಮೊದಲೇ ತಿಳಿದು ಕರಡಿಗಳು ದೂರ ಉಳಿಯುತ್ತವೆ | ಕಾಡಿನಲ್ಲಿ ಒಂಟಿಯಾಗಿ ಸಂಚರಿಸಬೇಡಿ |
| ಕರಡಿಗಳನ್ನು ಆಕರ್ಷಿಸುವುದನ್ನು ತಪ್ಪಿಸಲು ಮಹುವಾ(ಇಪ್ಪೆ) ಹೂವುಗಳಂತಹ ಅರಣ್ಯೇತರ ಉತ್ಪನ್ನಗಳನ್ನು ಮನೆಯಲ್ಲಿ ಸುರಕ್ಷಿತವಾಗಿರಿಸಿಕೊಳ್ಳಿ | ಸೂರ್ಯಾಸ್ತದ ನಂತರ ಅಥವಾ ಕತ್ತಲಾದ ನಂತರ ಹೂವು, ಸೊಪ್ಪು, ಮರದ ಮುಟ್ಟುಗಳನ್ನು ಸಂಗ್ರಹಿಸಲು ಕಾಡಿಗೆ ಹೋಗಬೇಡಿ |
| ಹಠಾತ್ತಾಗಿ ನೀವು ಕರಡಿಗಳಿಗೆ ಎದುರಾದರೆ ಅಥವಾ ಕರಡಿಗಳು ನಿಮ್ಮನ್ನು ಗಮನಿಸುತ್ತಿದ್ದರೆ ನಿಧಾನವಾಗಿ ಹಿಂದೆ ಸರಿಯಿರಿ | ಕರಡಿಗಳು ಹತ್ತಿರ ಇದ್ದಾಗ ಅದರ ಗಮನ ಸೆಳೆಯುವ ಹಾಗೆ ಶಬ್ದ ಅಥವಾ ಓಡಬೇಡಿ ಕರಡಿಗಳು ಇದನ್ನು ಬೆದರಿಕೆ ಎಂದು ಭಾವಿಸಿ ನಮ್ಮ ಮೇಲೆ ದಾಳಿ ಮಾಡಬಹುದು |
| ಕರಡಿಗಳು ನಿಮ್ಮನ್ನು ಗಮನಿಸುವ ಮೊದಲು ನೀವು ಅದರ ಇರುವಿಕೆ ಗಮನಿಸಿದ ತಕ್ಷಣ ಯಾವುದೇ ಶಬ್ಧ ಮಾಡದೇ ನಿಂತು ನಿಧಾನಕ್ಕೆ ಹಿಂತಿರುಗಿ | ಕರಡಿಗಳಿಂದ ತಪ್ಪಿಸಿಕೊಳ್ಳಲು ಯಾವುದೇ ಹತ್ತಿರದ ಮರಗಳನ್ನೇರಬೇಡಿ, ಅವುಗಳ ಮರಗಳನ್ನು ಸರಾಗವಾಗಿ ಹತ್ತುತ್ತವೆ |
| ಕರಡಿಗಳು ದೂರದಿಂದ ನಿಮ್ಮ ಮೇಲೆ ದಾಳಿ ಮಾಡಲು ಬರುತ್ತಿರುವುದನ್ನು ಗಮನಿಸಿದ ತಕ್ಷಣ ಎರಡು ಕೈಗಳನ್ನು ಮೇಲಕ್ಕೆತ್ತಿ ಜೋರಾಗಿ ಕೂಗುವುದರಿಂದ ಕರಡಿಗಳು ನಮ್ಮನ್ನು ದೊಡ್ಡ ಎದುರಾಳಿ ಗಳೆಂದು ಭಾವಿಸಿ ಆಕ್ರಮಣ ನಿಲ್ಲಿಸುತ್ತದೆ | ಯಾವುದೇ ಕಾರಣಕ್ಕೂ ಕಲ್ಲುಗಳನ್ನು ಎಸೆಯಬೇಡಿ, ಇದು ಕರಡಿಗಳನ್ನು ಕೆರಳಿಸಬಹುದು ಅಥವಾ ನಮ್ಮ ಮೇಲೆ ದಾಳಿ ಮಾಡಬಹುದು |
| ಹಳ್ಳಿಯ ಪರಿಮಿತಿಯಲ್ಲಿ ಅಥವಾ ಕಾಡಂಚಿನ ಹಳ್ಳಿಗಳಲ್ಲಿ ಕರಡಿಗಳನ್ನ ಕಂಡ ಕೂಡಲೇ ಅರಣ್ಯ ಇಲಾಖೆಗೆ ವಿಷಯ ತಿಳಿಸಿ | ಸೂರ್ಯೋದಯ ಅಥವಾ ಸೂರ್ಯಾಸ್ತದ ಸಮಯಕ್ಕೆ ಮಲವಿಸರ್ಜನೆಗೆ ಕಾಡು ಅಥವಾ ಕಾಡಿನ ಅಂಚಿಗೆ ಹೋಗುವುದನ್ನು ನಿಲ್ಲಿಸಿ, ಶೌಚಾಲಯವನ್ನು ಬಳಸುವುದು ಒಳಿತು |
| ದಾಳಿಗೊಳಗಾದ ವ್ಯಕ್ತಿಯನ್ನು ತ್ವರಿತವಾಗಿ ಹತ್ತಿರದ ಆಸ್ಪತ್ರೆಗೆ ಕೊಂಡೊಯ್ಯಬೇಕು ಮತ್ತು ಅರಣ್ಯ ಇಲಾಖೆಗೆ ವಿಷಯ ತಿಳಿಸಬೇಕು | ಮನೆಯ ಸುತ್ತ ಮುತ್ತ ಅಥವಾ ರಸ್ತೆಯ ಬದಿಯಲ್ಲಿ ಆಹಾರದ ತ್ಯಾಜ್ಯಗಳನ್ನು ಎಸೆಯಬೇಡಿ, ಇದು ಕರಡಿಗಳನ್ನು ಆಕರ್ಷಿಸುತ್ತವೆ |


## ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು

# ಕರಡಿ

## ಆವಾಸ ಸ್ಥಾನ

ಒಣಪತನಶೀಲ ಕಾಡು ಹಾಗೂ ಭಾರತೀಯ ಉಪಖಂಡಗಳಲ್ಲಿ ಬದುಕುತ್ತವೆ



## ಸಂತಾನಾಭಿವೃದ್ಧಿ ಸಮಯ

ಹೆಚ್ಚಾಗಿ ಚಳಿಗಾಲದಲ್ಲಿ ಜನ್ಮ ನೀಡುತ್ತದೆ - ಡಿಸೆಂಬರ್ ಅಂತ್ಯದಿಂದ ಜನವರಿ ಆರಂಭದವರೆಗೆ ಸಂತಾನಾಭಿವೃದ್ಧಿ ನಡೆಸುತ್ತದೆ. ಮತ್ತು ಸಂತಾನಾಭಿವೃದ್ಧಿ ಸಮಯ ಸ್ಥಳದ ಪ್ರಕಾರ ಬದಲಾಗುತ್ತದೆ

### ಸಂತಾನಾಭಿವೃದ್ಧಿಯ ವಯಸ್ಸು

3.5 - 6 ವರ್ಷ

### ಗರ್ಭಾವಸ್ಥೆಯ ಅವಧಿ

6 - 7 ತಿಂಗಳು


ಪ್ರತೀ 3 ವರ್ಷಕ್ಕೊಮ್ಮೆ ಸಂತಾನಾಭಿವೃದ್ಧಿ ನಡೆಸುತ್ತದೆ

ಒಂದು ಸಲಕ್ಕೆ 1-2 ಮರಿ ಹಾಕುತ್ತವೆ



ಮರಿಗಳನ್ನು ಬೆನ್ನಿನ ಮೇಲೆ ಹೊತ್ತು ತಿರುಗುತ್ತದೆ
ಮರಿಗಳು ತಾಯಿಯ ಜೊತೆ1-2 ವರ್ಷ ಇರುತ್ತವೆ

## ಸರಾಸರಿ ಜೀವಿತಾವಧಿ




## ಗರಿಷ್ಠ ತೂಕ




## ಆಹಾರ ಪದ್ಧತಿ

ಗೆದ್ದಲು,ಇರುವೆ ಮತ್ತು ಇತರೆ ಕೀಟಸಕ್ಕರೆ ಭರಿತ ಹಣ್ಣುಗಳು, ಹೂ, ಬೇರು ಹಾಗು ಗೆಡ್ಡೆಗಳು



ಸರ್ವಭಕ್ಷಕ ಹಾಗೂ ಅವಕಾಶವಾದಿ

## IUCN ಸ್ಥಿತಿ

ದುರ್ಬಲ ಸ್ಥಿತಿಯಲ್ಲಿದೆ

## ಸಂತತಿ

<10,000 to >20,000

## ನಡವಳಿಕೆ

ಬಹುಪಾಲು ಏಕಾಂತಲ್ಲಿರುತ್ತದೆ, ರಾತ್ರಿಯಲ್ಲೇ ದೈನಂದಿನ ಕ್ರಿಯೆ ನಡೆಸುತ್ತದೆ ಮತ್ತು ಬಂಡೆ ಗಳನ್ನೊಳಗೊಂಡ ಕಾಡುಗಳಲ್ಲಿ ಹುರಿದುಂಬಿಸಿ ಕೊಳ್ಳುತ್ತದೆ

ಕರಡಿಗಳಿಗೆ ದುರ್ಬಲ ದೃಷ್ಟಿ ಮತ್ತು ಮಂದವಾಗಿ ಕೇಳಿಸುವುದರಿಂದ ನಮ್ಮ ಇರುವಿಕೆಯನ್ನು ಹತ್ತಿರಕ್ಕೆ ಸಮೀಪಿಸುವ ತನಕ ಪತ್ತೆಹಚ್ಚಲಾರದು





- ನಿಶಾಚರಿ ಹಾಗೂ ಸೂರ್ಯಾಸ್ತದಿಂದ ಸೂರ್ಯೋದಯವರೆಗೂ ಸಕ್ರಿಯವಾಗಿರುತ್ತದೆ ಕಪ್ಪು ಬಣ್ಣದ ದಪ್ಪ ಹೊದಿಕೆ ಮತ್ತು ಎದೆಯಮೇಲೆ V ಅಥವಾ Y ಆಕಾರದ ಗುರುತು ಇರುತ್ತದೆ
- ಆಹಾರಕ್ಕಾಗಿ ಮಣ್ಣನ್ನು ಆಗೆಯುತ್ತಾ ಶಬ್ದ ಮಾಡುತ್ತಿರುತ್ತದೆ
- ಕೀಟಗಳನ್ನು ಮತ್ತು ಜೇನುಗೂಡುಗಳನ್ನು ಭಕ್ಷಿಸಬೇಕಾದಾಗ ದೂಳು ಮತ್ತು ಕೀಟಗಳಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಮೂಗಿನ ಹೊಳ್ಳೆಗಳನ್ನು ಮುಚ್ಚಿಕೊಳ್ಳುತ್ತದೆ
- ಕರಡಿಗಳು ಜೇನುಗೂಡಿಗಳಿಗಾಗಿ ಮರವನ್ನೇರುತ್ತದೆ
- ಮರಿ ಹಾಕುವುದಕ್ಕಾಗಿ ಗುಹೆಗಳನ್ನು ಬಳಸುತ್ತದೆ
- ತಾಯಿ ಕರಡಿಗಳು ಮರಿಗಳನ್ನು ಸಂರಕ್ಷಣೆ ಮಾಡುವುದಕ್ಕಾಗಿ ಮನುಷ್ಯರ ಮೇಲೆ ದಾಳಿ ಮಾಡುತ್ತದೆ
- ಬೆದರಿಕೆ ಬಂದಾಗ ಎರಡು ಕಾಲಲ್ಲಿ ನಿಂತು ಉಗುರುಗಳನ್ನು ಅಸ್ತ್ರಗಳಾಗಿ ಬಳಸುತ್ತದೆ
- ಅತ್ಯುತ್ತಮವಾಗಿ ವಾಸನೆ ಗ್ರಹಿಸಬಲ್ಲದು ಆದರೆ ಸಮೀಪದ ದೃಷ್ಟಿ ಹೊಂದಿದೆ
- ಮನುಷ್ಯನ ಪ್ರದೇಶವನ್ನು ಸುಲಭವಾಗಿ ಹೊಂದಿಕೊಳ್ಳುತ್ತವೆ, ಮತ್ತು ಆಹಾರ ತ್ಯಾಜ್ಯಕ್ಕೆ ಆಕರ್ಷಿತವಾಗುತ್ತದೆ

## ನಿಮಗಿದು ಗೊತ್ತೇ?

- ಕರಡಿಗಳು ಪೂರಕ ಪರಿಸರ ವ್ಯವಸ್ಥೆಗೆ ಹಾಗೂ ಬೀಜಗಳ ಪ್ರಸರಣೆಗೆ ಮತ್ತು ಗೆದ್ದಲುಗಳ ಸಂತತಿಯನ್ನು ನಿಯಂತ್ರಿಸುತ್ತದೆ
- ಕರಡಿಗಳನ್ನು ಸುಮಾರು 400 ವರ್ಷಗಳಿಂದ ಸರ್ಕಸ್ ಅಥವಾ ಮನರಂಜನೆಗೋಸ್ಕರ ಅತೀ ಕ್ರೂರವಾಗಿ ಶೋಷಣೆ ಮಾಡಿದ್ದೇವೆ
- ಕೃಷಿ, ಗಣಿಗಾರಿಕೆ, ಕಾಡಿನ ಅತಿಕ್ರಮಣ, ಮತ್ತು ಜಾನುವಾರುಗಳನ್ನು ಮೇಯಿಸುವುದರಿಂದ ಅವುಗಳ ಆವಾಸಸ್ಥಾನ ವಿಘಟನೆಯಾಗಿದೆ
- ಬೇಸಿಗೆ ಕಾಲದಲ್ಲಿ ನೀರಿನ ಕೊರತೆಯಿಂದ ಕರಡಿಗಳು ಮಾನವನ ಸ್ಥಳಗಳಿಗೆ ಬರುತ್ತವೆ
- ಅವಶ್ಯಕತೆಗೂ ಹೆಚ್ಚಾಗಿ ಅರಣ್ಯೇತರ ಹೂವುಗಳು, ಹಣ್ಣುಗಳು ಮತ್ತು ಇಪ್ಪೆ ಜೇನುಗೂಡುಗಳನ್ನು ಸಂಗ್ರಹಿಸುವುದರಿಂದ ಅವುಗಳಿಗೆ ಆಹಾರದ ಕೊರತೆಯುಂಟಾಗಿ ಮನುಷ್ಯನ ಆವಾಸಸ್ಥಾನಕ್ಕೆ ಕರಡಿಗಳು ಬಂದು ಸಂಘರ್ಷಕ್ಕೆ ಕಾರಣವಾಗುತ್ತದೆ
- ಆಹಾರಕ್ಕಾಗಿ ಮೈಲಿಗಟ್ಟಲೇ ನಡೆಯುತ್ತವೆ, ಮತ್ತು ಮನುಷ್ಯನ ಆಹಾರ ತ್ಯಾಜ್ಯಗಳು ಇವುಗಳನ್ನು ಆಕರ್ಷಿಸಿ ಕೊನೆಗೆ ಮನುಷ್ಯನ ಆವಾಸ ಸ್ಥಾನಗಳ ಹತ್ತಿರಕ್ಕೆ ಬರುವ ಹಾಗೆ ಮಾಡುತ್ತದೆ
- ಅತೀ ಹೆಚ್ಚು ಕರಡಿಗಳ ದಾಳಿ ಇಪ್ಪೆ ಹೂಗಳು ಮತ್ತು ಜೇನು ಸಂಗ್ರಹಣೆಗೆ ಕಾಡಿಗೆ ಹೋಗುವ ಅರಣ್ಯವಾಸಿಗಳ ಮೇಲೆ ನಡೆಯುತ್ತದೆ. ಏಕೆಂದರೆ ಕರಡಿಗಳ ಆಹಾರದಲ್ಲಿ ಜೇನು ಮತ್ತು ಹಿಪ್ಪೆ ಹೂಗಳು ಕೂಡ ಪ್ರಮುಖ ಸ್ಥಾನವನ್ನು ಹೊಂದಿದೆ
- ಪಾರಂಪರಿಕ ಬೆಳೆಗಳಿಂದ ಲಾಭದಾಯಕ ಬೆಳೆಗಳಿಗೆ ಮಾರುಹೋಗುವುದರಿಂದ ಮತ್ತು ಈ ಬೆಳೆಗಳು ಕರಡಿಗಳಿಗೆ ಪೌಷ್ಟಿಕಾಂಶ ಒದಗಿಸುವುದರಿಂದ ಆಕರ್ಷಣೆಗೆ ಒಳಪಡುತ್ತದೆ
- ಬಹುಶಃ ಬೇಸಿಗೆಯಲ್ಲಿ ಇಪ್ಪೇ ಸಂಗ್ರಹ ಮಾಡುವಾಗ, ಚಳಿಗಾಲದಲ್ಲಿ ಸೌದೆ ಸಂಗ್ರಹ ಮಾಡುವಾಗ ಮತ್ತು ಮಳೆಗಾಲದಲ್ಲಿ ಹಣಬೆ ಸಂಗ್ರಹ ಮಾಡುವಾಗ ದಾಳಿ ನಡೆಯುತ್ತದೆ

## ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು



# ಕಾಡು ಹಂದಿಗಳನ್ನು ಕಂಡರೆ ಏನು ಮಾಡಬೇಕು ಮತ್ತು ಏನು ಮಾಡಬಾರದು

| ಮಾಡಬೇಕು ✓ | ಮಾಡಬಾರದು ✕ |
| --- | --- |
| ಕಾಡುಹಂದಿಗಳಿಂದ ಸುರಕ್ಷಿತ ಅಂತರ ಕಾಪಾಡಿಕೊಳ್ಳಿ | ಅವುಗಳನ್ನು ಮೂಲೆಗುಂಪು ಮಾಡಬೇಡಿ ಅಥವಾ ಪ್ರಚೋದಿಸಬೇಡಿ |
| ರಾತ್ರಿಯಲ್ಲಿ ಕಾಡುಹಂದಿಗಳಿರುವ ಪ್ರದೇಶದಲ್ಲಿ ಗುಂಪಾಗಿ ಸಂಚರಿಸಿ ಮತ್ತು ಟಾರ್ಚ್ ಲೈಟ್ ಗಳನ್ನು ಬಳಸಿ ಮತ್ತು ಜೋರಾಗಿ ಮಾತನಾಡುತ್ತಾ ಸಂಚರಿಸಿ | ಮರಿಗಳನ್ನು ಓಡಿಸಲು ಅಥವಾ ಅಡಚಣೆ ಮಾಡಬೇಡಿ ಕಾಡು ಹಂದಿಗಳು ತಮ್ಮ ಮರಿಗಳನ್ನು ರಕ್ಷಿಸಲು ದಾಳಿ ಮಾಡಬಹುದು |
| ಕಾಡು ಹಂದಿಗಳನ್ನು ಓಡಿಸಲು ದೊಡ್ಡ ಶಬ್ಧ ಹೊರಹೊಮ್ಮಿಸುವ ಡ್ರಮ್ ಗಳನ್ನೂ ಬಳಸಿ | ಒಬ್ಬರೇ ಅರಣ್ಯ ಪ್ರದೇಶಕ್ಕೆ ಅರಣ್ಯೇತರ ಪದಾರ್ಥಗಳಾದ ಇಪ್ಪೆ ಹೂಗಳು ಬಿದಿರು ಸಂಗ್ರಹಿಸಲು ಹೋಗಬೇಡಿ |
| ಹಳ್ಳಿಯ ಪರಿಮಿತಿಯಲ್ಲಿ ಅಥವಾ ರಸ್ತೆಯಲ್ಲಿ ಕಾಡು ಹಂದಿಯನ್ನು ಕಂಡರೆ ನಿಧಾನವಾಗಿ ಹಿಂದೆ ಸರಿದು ದಾರಿ ಮಾಡಿಕೊಡಿ | ಓಡಿಸಬೇಡಿ ಮತ್ತು ತೊಂದರೆ ಕೊಡಬೇಡಿ, ಇದು ನಮ್ಮ ಮೇಲೆ ಆಕ್ರಮಣ ಮಾಡುತ್ತದೆ |
| ರಸ್ತೆಯಲ್ಲಿ ಕಾಡುಹಂದಿಗಳು ಮತ್ತು ಹಂದಿಮರಿಗಳು ಎದುರಾದರೆ ವಾಹನದಲ್ಲೇ ಇರುವುದು ಉತ್ತಮ | ಕಾಡುಹಂದಿಗಳಿಗೆ ಕಲ್ಲಿಂದ ಹೊಡೆಯಬೇಡಿ, ಇದು ಅದನ್ನು ಕೆರಳಿಸುತ್ತದೆ |
| ಭೂಮಿಗಳನ್ನು ಬೇಲಿಗಳಿಂದ ಮತ್ತು ಕಲಾಯಿ ಮಾಡಿದ ಉಕ್ಕಿನ ಬೇಲಿಗಳು ಮತ್ತು ಭೂಮಿ ಒಳಗಡೆ 1 ಅಡಿಯಿಂದ ಸಿಮೆಂಟ್ ಬಳಸಿ ಕಟ್ಟುವುದು ಉತ್ತಮ | ಆಹಾರ ತ್ಯಾಜ್ಯಗಳನ್ನು ರಸ್ತೆ ಬದಿ ಅಥವಾ ತೆರೆದ ಸ್ಥಳಗಳಲ್ಲಿ ಹಾಕಬೇಡಿ |
| ಕಸದ ಬುಟ್ಟಿಗಳನ್ನು ಮುಚ್ಚಿಡಿ ಇದು ಕಾಡು ಹಂದಿಗಳನ್ನು ಆಕರ್ಷಿಸುತ್ತವೆ | ಕಾಡಿನಲ್ಲಿ ಅಥವಾ ಕಾಡಿನ ಅಂಚಿನಲ್ಲಿ ಮಲವಿಸರ್ಜನೆ ಮಾಡಬೇಡಿ, ಶೌಚಾಲಯ ಬಳಸುವುದು ಉತ್ತಮ |
| ಕಾಡು ಹಂದಿಗಳಿಂದ ದಾಳಿಗೊಳಗಾದ ತಕ್ಷಣವೇ ಹತ್ತಿರದ ಆಸ್ಪತ್ರೆಗೆ ದಾಖಲಾಗಿ | ವೈದ್ಯಕೀಯ ಸಹಾಯ ಪಡೆಯಲು ವಿಳಂಬ ಮಾಡಬೇಡಿ ಅಥವಾ ಸ್ವಯಂ ಚಿಕಿತ್ಸೆಗೆ ಒತ್ತು ಕೊಡಬೇಡಿ |

## ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ


ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು



# ಕಾಡು ಹಂದಿ

## ಸ್ಥಿತಿ : ಕನಿಷ್ಠ ಕಾಳಜಿ





- ಕಾಡು ಹಂದಿಗಳಿಗೆ ದೊಡ್ಡ ಕೋರೆ ಹಲ್ಲುಗಳಿರುತ್ತವೆ ಮತ್ತು ಅದು ನಿರಂತರವಾಗಿ ಬೆಳೆಯುತ್ತಿರುತ್ತದೆ
- ಸರ್ವಭಕ್ಷಕ ಮತ್ತು ಅವಕಾಶವಾದಿ ಆಹಾರ ಹುಡುಕುತ್ತದೆ
- ಪ್ರಾಥಮಿಕವಾಗಿ ನಿಶಾಚರಿ
- ಗಂಡು ಕಾಡು ಹಂದಿಗಳಿಗೆ ತಲೆಯ ಮೇಲಿಂದ ಹಿಂದಿನ ವರೆಗೆ ದಪ್ಪದಾದ ಕೂದಲನ್ನು ಹೊಂದಿರುತ್ತದೆ
- ದಿನಕ್ಕೆ 4-8 ಗಂಟೆಗಳು ಆಹಾರ ಹುಡುಕುವುದಕ್ಕೆ ಅಥವಾ ಆಹಾರ ಇರುವ ಕಡೆ ಪ್ರಯಾಣ ಮಾಡುವುದಕ್ಕೆ ಬಳಸುತ್ತದೆ
- ಬೆವರು ಗ್ರಂಥಿಗಳಿಲ್ಲದ ಕಾರಣ ತುಂಬಾ ಗಂಟೆ ಗಳು ಕೆಸರಿನಲ್ಲೇ ಕಾಲ ಕಳೆಯುತ್ತದೆ ಅದು ದೇಹದ ತಾಪಮಾನವನ್ನು ನಿಯಂತ್ರಿಸಲು ಮತ್ತು ದೇಹದಲ್ಲಿರುವ ಪರಾವಲಂಬಿ ಕೀಟಗಳನ್ನು ತೆಗೆಯಲು ಹಾಗೂ ಸೂಕ್ಷ್ಮವಾದ ಚರ್ಮವನ್ನು ಸೂರ್ಯನಿಂದ ರಕ್ಷಿಸುತ್ತದೆ
- ಮಣ್ಣಿನ ಪದರಗಳನ್ನು ಆಹಾರಕ್ಕಾಗಿ ಆಗೆಯುತ್ತದೆ ಇದಕ್ಕೆ ರೂಟಿಂಗ್ ಎನ್ನುತ್ತಾರೆ
- ಬೆಳೆಗಳನ್ನು ಬೇರು ತಲೆ ಕೆಳಗೆ ಮಾಡಿ, ತುಳಿದು ಅಥವಾ ತಿಂದು  ಹಾಳು ಮಾಡುತ್ತದೆ
- ಆಹಾರ ತಿನ್ನುವುದು ಒಂದು ಸಾಮಾಜಿಕ ಚಟುವಟಿಕೆ; ಒಂಟಿ ಗಂಡುಗಳು ಆಹಾರ ತಿನ್ನುವಾಗ ಗುಂಪನ್ನು ಸೇರುತ್ತದೆ
- ಮಾನವನ ಪ್ರಾಬಲ್ಯ ಪ್ರದೇಶಗಳಲ್ಲಿ ತೆರೆದಿಟ್ಟ ಕಸದ ರಾಶಿಗಳು ಇವುಗಳನ್ನು ಆಕರ್ಷಿಸುತ್ತವೆ

### ಏಷ್ಯಾದಲ್ಲಿ ಆವಾಸಸ್ಥಾನ

ಕಾಡು ಮತ್ತು ಕಾಡಿನ ಅಂಚಿನಲ್ಲಿ ವ್ಯಾಪಕವಾಗಿ ಕಾಣಸಿಗುತ್ತದೆ

### ಆಹಾರ ಪದ್ಧತಿ

ಗೆಡ್ಡೆ, ಬೇರು, ಹಣ್ಣು, ಎಲೆ, ಕೀಟ, ಚಿಕ್ಕ ಕಪ್ಪೆ, ಸರೀಸೃಪಗಳು  ಮತ್ತು ಕೊಳೆಯುವ ಮಾಂಸ ಮತ್ತು ಕಸ ಹಾಗೂ ಬೆಳೆಗಳು

### ಜೀವಿತಾವಧಿ

10-14 ವರ್ಷಗಳು

### ಸಂತಾನಾಭಿವೃದ್ಧಿ

ಕಾಲೋಚಿತ - ಸಾಧಾರಣವಾಗಿ ಮಳೆಗಾಲದ ಮುಂಚೆ ಅಥವಾ ನಂತರ ಮತ್ತು ಆಹಾರದ ಲಭ್ಯತೆ ಹಾಗೂ ಹವಾಮಾನ ಪರಿಸ್ಥಿತಿಯ ಮೇಲೆ ಆಧಾರ ಪಟ್ಟಿರುತ್ತದೆa

### ಸಂತಾನಾಭಿವೃದ್ಧಿಯ ವಯಸ್ಸು


8-18 ತಿಂಗಳು

### ಗರ್ಭಾವಸ್ಥೆಯ ಅವಧಿ

3 - 4 ತಿಂಗಳು

### ಜನನ

ಒಂದು ಸಲಕ್ಕೆ4-6 ಕಾಡು ಹಂದಿ ಮರಿಗಳು ಹಾಕುತ್ತವೆ





### ಗುಂಪಿನ ಗಾತ್ರ

4 -13

### ಗುಂಪಿನ ರಚನೆ

ತಾಯಿ ತನ್ನ ಅತೀ ಚಿಕ್ಕ ಮರಿಗಳ ಜೊತೆ, ಮಧ್ಯ ವಯಸ್ಸಿನ ವಯಸ್ಕ ಮರಿಗಳು ಹಾಗೂ ಸಂಯೋಗದ ಅವಧಿಯಲ್ಲಿ ಗಂಡಿನ ಜೊತೆ ಇರುತ್ತವೆ
ಗಂಡು 8-16 ತಿಂಗಳಿಗೆ ಚದುರಿ ಹೋಗುತ್ತವೆ, ಹೆಣ್ಣು ತಾಯಿಯ ಜೊತೆಯಲ್ಲೇ ಉಳಿಯುತ್ತವೆ



## ನಿಮಗಿದು ಗೊತ್ತೇ ?

- ಹೆಣ್ಣು ಕಾಡುಹಂದಿ ಮತ್ತು ಮರಿಗಳಿರುವ ಗುಂಪಿಗೆ ಸೌಂಡರಸ್ ಎನ್ನುತ್ತಾರೆ ಗುಂಪಿನ ಗಾತ್ರವು ಹವಾಮಾನಕ್ಕೆ, ಆವಾಸ ಸ್ಥಾನ, ನೀರು, ಆಹಾರದ ಮೇಲೆ ಅವಲಂಬಿತವಾಗಿರುತ್ತದೆ
- ಭಾರತದಲ್ಲಿ ಕಂಡುಬರುವ ಕಾಡು ಹಂದಿಗಳು ಒಂದು ಉಪತಳಿ. ಯೂರೋಪ್ ದೇಶದ ಕಾಡು ಹಂದಿಗಳಿಗೆ ಹೋಲಿಸಿದರೆ ಇಲ್ಲಿನ ಕಾಡುಹಂದಿಗಳ ತಲೆಯ ಮೇಲೆ ದಪ್ಪದ ಕೂದಲು ಮತ್ತು ಅಗಲವಾದ ಉದ್ದವಾದ ತಲೆಬುರುಡೆ ಮತ್ತು ಚಿಕ್ಕ ಕಿವಿಗಳಿರುತ್ತವೆ
- ಕಾಡು ಹಂದಿಗಳು ಬೆಳಗಿನ ಸಮಯದಲ್ಲಿ ವಿಶ್ರಾಂತಿ ಪಡೆಯಲು ತಾತ್ಕಾಲಿಕ ನಿದ್ರೆ ಮಾಡುವ ಹಾಸಿಗೆಗಳನ್ನು ಮಾಡಿಕೊಳ್ಳುತ್ತವೆ, ಒಂದು ಹಾಸಿಗೆಅಲ್ಲಿ 15 ಹಂದಿಗಳು ಮಲಗುವಷ್ಟು ದೊಡ್ಡದಾಗಿರುತ್ತದೆ ಕೆಲವು ಸಲ ಬೇರೆ ಪ್ರಾಣಿಗಳು ಆಗೆದಿರುವ ಮಣ್ಣಿನಲ್ಲಿ ಮಲಗಿರುತ್ತವೆ
- ಆಹಾರ ಸರಪಳಿಯಲ್ಲಿ ಕಾಡು ಹಂದಿಗಳು ದೊಡ್ಡ ಮಾಂಸಾಹಾರಿಗಳಿಗೆ ಬಹುಮುಖ್ಯವಾಗುತ್ತದೆ. ಮತ್ತು ಬೀಜ ಪ್ರಸರಣೆಯಲ್ಲಿ ಹಾಗೂ ಕೀಟಗಳನ್ನು ನಿಯಂತ್ರಿಸುತ್ತವೆ
- ಅತೀ ಹೆಚ್ಚು ಕಾಡು ಹಂದಿಗಳು ಮನುಷ್ಯನ ಮೇಲೆ ದಾಳಿ ಮಾಡುವುದು ನಾವು ಹಠಾತ್ ಆಗಿ ಸಮೀಪಿಸಿದಾಗ ಅಥವಾ ಅದನ್ನು ಬೆಳೆ ಭೂಮಿಗಳಲ್ಲಿ ಮೂಲೆ ಗುಂಪಾಗಿಸುವುದರಿಂದ

## ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆ

ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷದ ತಗ್ಗಿಸುವಿಕೆಯ ಮೇಲೆ ಇಂಡೋ-ಜರ್ಮನ್ ಸಹಕಾರ
2017-2023
ಭಾರತದಲ್ಲಿ ಮಾನವ-ವನ್ಯಜೀವಿ ಸಂಘರ್ಷ ತಗ್ಗಿಸುವಿಕೆಗೆ
ಸಾಮರಸ್ಯದ ಸಹ-ಅಸ್ತಿತ್ವದ ವಿಧಾನವನ್ನು ತೆಗೆದುಕೊಳ್ಳುವುದು